3. This order issued in accordance with the financial powers delegated to Principal Secretaries/Secretaries vide G.O. NO. FD 1 TFP 2008 dated 16-5-2008.

By Order and in the name of the Governor of Karnataka
K.S. VENUGOPAL,
Under Secretary to Government,
Infrastructure Development Department,

P.R. 1808

ಶಿಕ್ಷಣ ಸಚಿವಾಲಯ

ವಿಷಯ : ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿ3(4)ಉ.ವ್ಯಾ. ಅನು1/2010–11 ದಿನಾಂಕ 28–04–2010.

ಪ್ರಸ್ತಾವನೆ :

1. ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು ವಿಶೇಷವಾಗಿ ವಿಜ್ಞಾನ, ಗಣಿತ ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಅವರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವುದು ಸೂಕ್ತ ಹಾಗೂ ಇದರಿಂದ ಶಿಕ್ಷಕರಲ್ಲಿ ಕಾರ್ಯಕ್ಷಮತೆ ಹಾಗೂ ವಿಷಯ ಜ್ಞಾನ ವೃದ್ಧಿಯಾಗಲು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವಾಗ ಮಂಜೂರಾಗಿರುವ ಒಟ್ಟು ವೃಂದ ಬಲದ ಶೇ.5 ರಷ್ಟು ಶಿಕ್ಷಕರನ್ನು ನಿಯೋಜಿಸುವುದು ಅಪೇಕ್ಷಣೀಯ. ಆದ್ದರಿಂದ ಸದರಿ ಶಿಕ್ಷಕರಿಗೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಅನುಮತಿಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.
2. ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಇಡಿ : 135 ಯೋಯೋಕ 2010, ಬೆಂಗಳೂರು, ದಿನಾಂಕ : 02–07–2010

[ಇಡಿ : 79 : ಸ್ವೀಮರ (ಯುನಿಕ್) 2010, ದಿನಾಂಕ 02–07–2010]

3. 2010–11ನೇ ಸಾಲಿನಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು ವಿಶೇಷವಾಗಿ ವಿಜ್ಞಾನ, ಗಣಿತ ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಅವರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಷರತ್ತುಗಳು:

- ನೇಮಕಗೊಂಡ ಶಿಕ್ಷಕರು ಖಾಯಂಪೂರ್ವ ಸೇವಾವಧಿ ಮುಗಿಸಿ ಕನಿಷ್ಠ 05 ವರ್ಷ ಸೇವೆ ಸಲ್ಲಿಸಿರಬೇಕು.
- ವಿಜ್ಞಾನ ಶಿಕ್ಷಕರಾಗಿದ್ದಲ್ಲಿ ಬಿ.ಎಸ್ಸಿ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಿಯೋಜಿಸಬಹುದು.
- ಆಂಗ್ಲ ವಿಷಯಗಳನ್ನು ಒಳಗೊಂಡ ಬಿ.ಎ. ಪದವಿಗಾಗಿ ಪಿ.ಯು.ಸಿ. ಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿರಬೇಕು ಅಥವಾ ಪ್ರಥಮ ಭಾಷೆ ಆಂಗ್ಲ ಭಾಷೆಯಾಗಿರಬೇಕು ಅಥವಾ ದ್ವಿತೀಯ ಭಾಷೆಯಲ್ಲಿ ಶೇ. 60 ಅಂಕಗಳಿಸಿರಬೇಕು.
- ಪದವಿಯನ್ನು ಪೂರೈಸಿದ ನಂತರ ಕನಿಷ್ಠ 10 ವರ್ಷ ಶಿಕ್ಷಣ ಇಲಾಖೆಯಲ್ಲಿಯೇ ಕಾರ್ಯನಿರ್ವಹಿಸುವುದಾಗಿ ಬಾಂಡ್ ಪೇಪರ್ ರೂ. 10–00 ನಲ್ಲಿ ಸಮ್ಮತಿ ಸೂಚಿಸಿ ಒಪ್ಪಿಗೆ ನೀಡಬೇಕು.
- ಇಲಾಖೆಯ ಸಹಕಾರವಿಲ್ಲದೆಯೇ ಪದವಿ ಕಾಲೇಜುಗಳಲ್ಲಿ ಪ್ರವೇಶಾವಕಾಶವನ್ನು ಪಡೆದುಕೊಳ್ಳಬೇಕು. ಆರಂಭದಲ್ಲಿ ಪ್ರಾಥಮಿಕ ಶಿಕ್ಷಕರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸುವಾಗ 750 ವಿಜ್ಞಾನ ಶಿಕ್ಷಕರಿಗೆ (ಪಿಸಿಎಂ ಮತ್ತು ಸಿಬಿಝಡ್) ಸೇರಿ ಮತ್ತು 250 (ಕಲಾ ಮತ್ತು ಆಂಗ್ಲ) ಪದವಿಗೆ ನಿಯೋಜಿಸಬಹುದು.
- ಈ ತರಬೇತಿ ಅವಧಿಯಲ್ಲಿ ಯಾವುದೇ ತೆರನಾದ ರಜೆಗೆ ಅವಕಾಶವಿರುವುದಿಲ್ಲ.(ಆಕಸ್ಮಿಕ ರಜೆ ಮತ್ತು ಬೇಸಿಗೆ ರಜೆ ಹೊರತುಪಡಿಸಿ).
- ಜ್ಞಾನದಾಹಿ ಶಿಕ್ಷಕರಿಗೆ ಮಾತ್ರ ಉನ್ನತ ವ್ಯಾಸಂಗ ತರಬೇತಿಗೆ ಆಯ್ಕೆ ಮಾಡಲಾಗುವುದು.
- ಉನ್ನತ ವ್ಯಾಸಂಗದ ಅವಧಿಯಲ್ಲಿ ಅವೆ ಹುದ್ದೆ ಅಲ್ಲಿಯೇ ಖಾಲಿಯಿರುವುದಿಲ್ಲ.
- ವ್ಯಾಸಂಗದ ನಂತರ ಪುನಃ ಅದೇ ಶಾಲೆಗೆ ಹಾಜರಾಗುವುದು.
- ವ್ಯಾಸಂಗದ ಅವಧಿಯಲ್ಲಿ ಶಿಕ್ಷಕರು ಪಡೆಯುತ್ತಿರುವ ಸಂಬಳ ನೀಡಲಾಗುವುದು.

- ❖ ವ್ಯಾಸಂಗಕ್ಕಾಗಿ ತಗಲುವ ನೈಜ ವೆಚ್ಚ ಹಾಗೂ ಪರೀಕ್ಷಾ ಶುಲ್ಕ ಸರ್ಕಾರ ಭರಿಸಬೇಕಾಗುತ್ತದೆ.
- ❖ ಉನ್ನತ ವ್ಯಾಸಂಗಕ್ಕೆ ನಿಯೋಜಿತನಾಗುವ ನೌಕರರು 45 ವರ್ಷಗಳ ವಯೋಮಿತಿಯನ್ನು ಮೀರಿರಬಾರದು.
- ❖ ವ್ಯಾಸಂಗಕ್ಕೆ ಆಯ್ಕೆಯಾದ ಶಿಕ್ಷಕರು ಜ್ಯೇಷ್ಠತೆಯ ಆಧಾರದ ಮೇಲೆ ನಿಯೋಜಿಸುವಂತಿರಬೇಕು.
- ❖ ನಿಯೋಜನೆಯ ಸಂಪೂರ್ಣ ಸೇವಾವಧಿಯಲ್ಲಿ ಒಂದು ಬಾರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.
- ❖ ನಿಯೋಜನೆಯು ಒಟ್ಟಾರೆ ವೃಂದಬಲದ ಶೇ. 5ನ್ನು ಮೀರಬಾರದು.
- ❖ ವ್ಯಾಸಂಗಕ್ಕೆ ನಿಯೋಜಿತನಾದ ಅಭ್ಯರ್ಥಿಗೆ 1/2 ದಿನಭತ್ಯೆ ಅಥವಾ ರೂ.2,000/-ಗಳಲ್ಲಿ ಯಾವುದು ಕಡಿಮೆಯೋ ಅದನ್ನು ನೀಡತಕ್ಕದ್ದು. ವೇತನ ಸಹಿತ ನಿಯೋಜಿಸುವುದರಿಂದ ನಿಗದಿತ ಫೀಯನ್ನು ಮಾತ್ರ ಸಂದಾಯ ಮಾಡಬಹುದು.
- ❖ ನಿಗದಿತ ಅವಧಿಯಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸದಿದ್ದಲ್ಲಿ ಒಂದು ವರ್ಷದ ವಿಸ್ತರಣಾವಧಿಯನ್ನು ನೌಕರರ ಹಕ್ಕಿನಲ್ಲಿರುವ ರಜೆಯೊಂದಿಗೆ ಪೂರೈಸಲು ಅವಕಾಶಗಳನ್ನು ನೀಡುವುದು.
- ❖ ನಿಯೋಜಿತ ಅಭ್ಯರ್ಥಿಯು ವ್ಯಾಸಂಗವನ್ನು ಪೂರೈಸದಿದ್ದಲ್ಲಿ ವ್ಯಾಸಂಗದ ಅವಧಿಯ ವೇತನ ಭತ್ಯೆಗಳನ್ನು ಸಂಪೂರ್ಣವಾಗಿ ವಸೂಲು ಮಾಡಲು ಈ ಸಂಬಂಧ ಅಭ್ಯರ್ಥಿಯಿಂದ ಫಾರಂ ಸಂಖ್ಯೆ-19 ರಲ್ಲಿ ಕರಾರು ಪತ್ರವನ್ನು ಪಡೆಯತಕ್ಕದ್ದು.
- ❖ ನಿಯೋಜಿತ ಅಭ್ಯರ್ಥಿಯು ವ್ಯಾಸಂಗದ ಪ್ರವೇಶಕ್ಕಾಗಿ ತೆರಳುವ ಮೊದಲ ಬಾರಿಯ ಹಾಗೂ ವ್ಯಾಸಂಗ ಪೂರೈಸಿ ಕೇಂದ್ರ ಸ್ಥಾನಕ್ಕೆ ಹಿಂತಿರುಗುವ ಪ್ರಯಾಣಗಳಿಗೆ ಮಾತ್ರ ಅರ್ಹ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಪಡೆಯತಕ್ಕದ್ದು.

4. ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 345 ವೆಚ್ಚ. 8 2010, ದಿನಾಂಕ 02.06.2010 ಮತ್ತು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ : ಯೋಇ/50/ಜಶ/2010, ದಿನಾಂಕ 13-05-2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ,
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

ಪಿ.ಆರ್. 1809

COMMERCE AND INDUSTRIES SECRETARIAT

Sub: Approval to the Project Proposal of M/s. ETCO Denim Pvt. Ltd., to establish a **"Textile Mill - Spinning, Weaving, Indigo Dyeing & Finishing of Cloth Fabrics"** at Aliabad Industrial Area, Bijapura District.

Read: Proceedings of the 23rd State High Level Clearance Committee (SHLCC) Meeting held on 19-06-2010.

Preamble:

M/s. ETCO Denim Pvt. Ltd., proposes to establish a **"Textile Mill - Spinning, Weaving, Indigo Dyeing & Finishing of Cloth Fabrics"** at Aliabad Industrial Area, Bijapura District with an investment of Rs. 316 crores, generating employment to about 1073 persons.

In the 23rd State High Level Clearance Committee (SHLCC) Meeting held on 19-06-2010, the proposal of the Company was discussed and approved.

Government has examined the recommendations made by the State High Level Clearance Committee in the 23rd Meeting held on 19-06-2010, in all aspects.

Hence the following Order.

Government Order No.: CI 332 SPI 2010, Bangalore Dated: 06-07-2010

Government is pleased to accord in principle approval to the project proposal of M/s. ETCO Denim Pvt. Ltd., to establish a **"Textile Mill - Spinning, Weaving, Indigo Dyeing & Finishing of Cloth Fabrics"** at Aliabad Industrial Area, Bijapura District with an investment of Rs. 316 crores, generating employment to about 1073 persons and extend the following infrastructure facilities, incentives and concessions.

INFRASTRUCTURE FACILITIES:

1. **Land:** 100 acres - KIADB to allot at Aliabad Industrial Area, Bijapura District.
2. **Water:** 15 lakh LPD from KIADB/ nearest water source, subject to approval of the Water Resources Department.
3. **Power:** 6200 KVA to be serviced by HESCOM.
4. **Incentives and Concessions:** As per prevailing Suvarna Vastra Neethi - Textile Policy of the State.

GENERAL TERMS AND CONDITIONS:

1. **Environment:** The promoters to obtain CFE and CFO from KSPCB and environmental clearance from MOEF, GOI.
2. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Vendor Development:** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

4. **Social Infrastructure Development:** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

5. **Others:**

   a) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.

   b) The promoters shall take all statutory and other necessary clearances from the competent authorities including GOI and shall submit milistones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka
APARNA PAVATE
Desk Officer (Technical Cell)
Commerce & Industries Department

P.R. No. 1810

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ಹಾಗೂ ನಂತರ ಅನುಮೋದಿತ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಲು ರಾಜ್ಯ ಉನ್ನತ ಮಟ್ಟದ ಸಮಿತಿ ರಚಿಸುವ ಕುರಿತು.

ಪ್ರಸ್ತಾವನೆ:

2010 ರ ಜೂನ್ 3 ಮತ್ತು 4 ರಂದು ನಡೆಸಲಾದ ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ರಾಜ್ಯ ಸರ್ಕಾರವು 389 ಉದ್ಯಮಿದಾರರೊಂದಿಗೆ ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಿದ್ದು, ಸಮ್ಮೇಳನದ ಸಮಯದಲ್ಲಿಯೂ ಕೂಡ 58 ಕ್ಕೂ ಹೆಚ್ಚಿನ ಪ್ರಸ್ತಾವನೆಗಳು ಸ್ವೀಕರಿಸಲ್ಪಟ್ಟಿರುತ್ತವೆ. ಈ ಎಲ್ಲಾ ಯೋಜನೆಗಳಿಂದ ರೂ. 4.50 ಲಕ್ಷ ಕೋಟಿಗೂ ಮೀರಿ ಬಂಡವಾಳ ಕರ್ನಾಟಕಕ್ಕೆ ಹರಿದು ಬರುವ ನಿರೀಕ್ಷೆ ಇರುತ್ತದೆ.

ಬಂಡವಾಳ ಹೂಡಿಕೆದಾರರ ನಿರೀಕ್ಷೆಗೆ ತಕ್ಕಂತೆ ಸ್ಪಂದಿಸಿ, ಅವರಿಗೆ ಬೇಕಾದ ಮೂಲಭೂತ ಸೌಕರ್ಯ ಹಾಗೂ ಅನುಮತಿಗಳನ್ನು ತ್ವರಿತವಾಗಿ ನೀಡುವುದು ಸರ್ಕಾರದ ಆಧ್ಯ ಕರ್ತವ್ಯವಾಗಿರುತ್ತದೆ.

ಒಡಂಬಡಿಕೆ ಪತ್ರಗಳನ್ನು ಸಹಿ ಮಾಡಿದ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮುಖ್ಯವಾಗಿದ್ದು, ಈ ಕಾರ್ಯವನ್ನು ನಿರಂತರವಾಗಿ ಉನ್ನತ ಮಟ್ಟದ ಸಮಿತಿಯು ಪರಿಶೀಲಿಸಿ, ಆಗಿಂದಾಗ್ಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿರುತ್ತದೆ.

ಈ ಸಂಬಂಧದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸುವ ಅವಶ್ಯಕತೆ ಇರುತ್ತದೆ.

ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 256 ಎಸ್‌ಪಿಐ 2010 ಬೆಂಗಳೂರು, ದಿನಾಂಕ: 26-06-2010

ಪ್ರಸ್ತಾವನೆಯಲ್ಲಿ ತಿಳಿಸಿದ ಅಂಶಗಳನ್ನೊಳಗೊಂಡಂತೆ, ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ಒಡಂಬಡಿಕೆ ಪತ್ರಗಳನ್ನು ಸಹಿ ಮಾಡಿದ ಯೋಜನೆಗಳ ಹಾಗೂ ನಂತರ ಅನುಮೋದಿತ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಲು ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರವು, ರಾಜ್ಯ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ರಚಿಸಿರುತ್ತದೆ.

1.	ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	ಅಧ್ಯಕ್ಷರು
2.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು	ಸದಸ್ಯರು
3.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ	ಸದಸ್ಯರು
4.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ	ಸದಸ್ಯರು
5.	ಶ್ರೀ ಐ.ಎಸ್.ಎನ್. ಪ್ರಸಾದ್ ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು	ಸದಸ್ಯರು
6.	ಡಾ: ಕೆ.ವಿ. ರಾಜು ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು	ಸದಸ್ಯರು
7.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ	ಸದಸ್ಯರು
8.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ	ಸದಸ್ಯರು
9.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರವಾಸೋದ್ಯಮ ಇಲಾಖೆ	ಸದಸ್ಯರು
10.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ	ಸದಸ್ಯರು
11.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು	

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ	ಸದಸ್ಯರು
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ	ಸದಸ್ಯರು
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ	ಸದಸ್ಯರು
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕೃಷಿ ಇಲಾಖೆ	ಸದಸ್ಯರು
15. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ	ಸದಸ್ಯರು
16. ಸರ್ಕಾರದ ಕಾರ್ಯದರ್ಶಿಗಳು (ಜವಳಿ, ಸಪ್ರಕ್ಕೈ, ಸಕ್ಕರೆ ಮತ್ತು ಗಣಿ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
17. ಸರ್ಕಾರದ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಸದಸ್ಯರು
18. ಸರ್ಕಾರದ ಕಾರ್ಯದರ್ಶಿಗಳು ಕಾರ್ಮಿಕ ಇಲಾಖೆ	ಸದಸ್ಯರು
19. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	ಸದಸ್ಯರು ಕಾರ್ಯದರ್ಶಿಗಳು
20. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ	ಸದಸ್ಯರು
21. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯಕಾರಿ ಸದಸ್ಯರು, ಕೆಐಎಡಿಬಿ	ಸದಸ್ಯರು
22. ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ	ಸದಸ್ಯರು
23. ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
24. ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಉದ್ಯೋಗ ಮಿತ್ರ	ಸದಸ್ಯರು
25. ಶ್ರೀ ಅರೂನ ರಾಮನ್, ಅಧ್ಯಕ್ಷರು C.I.I. ಬೆಂಗಳೂರು ಘಟಕ	ಸದಸ್ಯರು
26. ಶ್ರೀ ಅರುಣ ಚಾವ್ಲಾ ಸಹಾಯಕ ಸೆಕ್ರೆಟರಿ ಜನರಲ್ F.I.C.C.I. ನವದೆಹಲಿ	ಸದಸ್ಯರು

ಈ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಿ, ಅನುಮೋದನೆಗೊಂಡ ಪ್ರಸ್ತಾವನೆಗಳ ಅನುಷ್ಠಾನದ ಬಗ್ಗೆ ಪರಿಶೀಲಿಸುವುದು ಹಾಗೂ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವುದು. ಈ ಸಮಿತಿಯು, ತತ್‌ಕ್ಷಣದಿಂದ ಜಾರಿಗೆ ಬರುವುದು ಹಾಗೂ ಮುಂದಿನ ಆದೇಶ ಹೊರಡಿಸುವವರೆಗೆ ಜಾರಿಯಲ್ಲಿರುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1811

ಗುರುನಾಥ ಎಸ್. ಕುಲಕರ್ಣಿ
ನಿರ್ದೇಶಕರು(ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕಾರ್ಮಿಕ ಸಚಿವಾಲಯ

ವಿಷಯ : ಅಖಿಲ ಭಾರತ ವೃತ್ತಿ ಪರೀಕ್ಷೆಗಳ ಕಾರ್ಯ ಚಟುವಟಿಕೆಗಳನ್ನು ಮಾರ್ಪಡಿಸುವ ವಿಷಯವಾಗಿ ಆದೇಶ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಕಾಇ 64 ಇಟಿಎಂ 2006, ದಿನಾಂಕ: 05-10-2007.
2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ : ಉತಇ/ತರಬೇತಿ/ವೃಪವಿ/ಕುತಯೋ-1/ವಿವ-08/2010-11 ದಿನಾಂಕ : 30-06-201

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ವತಿಯಿಂದ ನಡೆಸಲಾಗುವ ಎಲ್ಲಾ ಪರೀಕ್ಷೆಗಳ ಸಂಬಂಧದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ(2)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ತಮ್ಮ ಪತ್ರದಲ್ಲಿ ಈವರೆಗಿನ ಅನುಭವಗಳು ಹಾಗು ವಿವಿಧ ಜಿಲ್ಲಾಧಿಕಾರಿಗಳಿಂದ ಬಂದಿರುವ ಪ್ರಸ್ತಾವನೆಗಳ ಆಧಾರದ ಮೇಲೆ ಹಾಗೂ ಈ ಸಂಬಂಧ ರಚಿಸಿದ್ದ ಪರೀಕ್ಷಾ ಸುಧಾರಣಾ ಸಮಿತಿ ನೀಡಿರುವ ಸಲಹೆಗಳ ಆಧಾರದ ಮೇಲೆ ಕೆಲವೊಂದು ಬದಲಾವಣೆಗಳನ್ನು ಮಾಡಿ ಮರು ಆದೇಶ ಹೊರಡಿಸುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 201 ಇಟಿಐ 2010 ಬೆಂಗಳೂರು, ದಿನಾಂಕ : 06-07-2010

ಉದ್ಯೋಗ ಮತ್ತು ತರಬೇತಿ ಇಲಾಖೆಯ ವತಿಯಿಂದ ನಡೆಸಲಾಗುವ ಎಲ್ಲಾ ಪರೀಕ್ಷೆಗಳ ಸಂಬಂಧದಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಕಾಇ 64 ಇಟಿಎಂ 2006 ದಿನಾಂಕ : 05-10-2007 ರಲ್ಲಿ ನಿಗದಿಪಡಿಸಿರುವ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಪರೀಕ್ಷಾ ಸುಧಾರಣಾ ಸಮಿತಿ ನೀಡಿರುವ ಸಲಹೆಗಳ ಆಧಾರದ ಮೇಲೆ ಈ ಕೆಳಕಂಡ ಬದಲಾವಣೆ ಮಾಡಿ ಆದೇಶಿಸಲಾಗಿದೆ.

ಇಲಾಖೆಯ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು.

1. ಸ್ಥಳೀಯ ಪರೀಕ್ಷಾ ಮಂಡಳಿ ಅಧ್ಯಕ್ಷರ ನೇಮಕಾತಿ.
2. ಪರೀಕ್ಷಾ ಕೇಂದ್ರ ಅಧೀಕ್ಷಕರ ನೇಮಕಾತಿ ಹಾಗೂ ಪ್ರಾಯೋಗಿಕ ಪರೀಕ್ಷಕರ ನೇಮಕಾತಿ.
3. ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು.
4. ಡಿ.ಜಿ.ಇ.ಟಿ. ನವದೆಹಲಿಯಿಂದ ಸ್ವೀಕರಿಸಿದ ಪ್ರಶ್ನೆ ಪತ್ರಿಕೆಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು, ಆಯಾಯ ಪರೀಕ್ಷಾ ಕೇಂದ್ರ ವ್ಯಾಪ್ತಿಗೆ ಒಳಪಡುವ ಖಜಾನೆಯಲ್ಲಿರಿಸುವುದು.
5. ವಿಚಕ್ಷಣ ದಳಗಳನ್ನು ರಚಿಸುವುದು.
6. ಪರಿವೀಕ್ಷಕರ ನೇಮಕ ಮಾಡುವುದು.
7. ಮೌಲ್ಯಮಾಪನ ಕಾರ್ಯಕ್ಕಾಗಿ ಅಧಿಕಾರಿ ಹಾಗೂ ಸಿಬ್ಬಂದಿಯವರನ್ನು ನೇಮಕ ಮಾಡುವುದು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಅನುಷ್ಠಾನಕ್ಕೆ ತಂದು, ಸಂಬಂಧಿಸಿದ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಪರೀಕ್ಷೆಗಳನ್ನು ನಡೆಸುವುದು.

ಸಂಬಂಧಿಸಿದ ಆಯಾಯ ಜಿಲ್ಲಾಧಿಕಾರಿಗಳು, ಪರಿವೀಕ್ಷಣ ದಳಗಳನ್ನು ರಚಿಸಿ ಹಾಗು ಪರೀಕ್ಷಾ ಕೇಂದ್ರವೊಂದಕ್ಕೆ ಒಬ್ಬರು ಪರಿವೀಕ್ಷಕರನ್ನು ನೇಮಕ ಮಾಡುವುದು. ಪರೀಕ್ಷೆಗಳು ಸುಗಮವಾಗಿ ನಡೆಸುವಂತೆ ಕ್ರಮ ಕೈಗೊಳ್ಳಲು ಆಯಾಯ ಜಿಲ್ಲೆಯ ಪೋಲೀಸ್ ಅಧೀಕ್ಷಕರುಗಳಿಗೆ ಪರೀಕ್ಷಾ ಕೇಂದ್ರದಲ್ಲಿ ಬಂದೋಬಸ್ತ್ ಏರ್ಪಡಿಸುವ ಸಂಬಂಧ ಹಾಗೂ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲು ತಿಳಿಸುವುದು.

ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವಾಗ ಈಗಾಗಲೇ ರಾಜ್ಯ ಪರೀಕ್ಷಾ ಮಂಡಳಿಯವರು ನಡೆಸುವ ರೀತಿಯಲ್ಲಿಯೇ ಮುಂದುವರೆಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1812

ವಿಮಲಾಕುಮಾರಿ
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ರಾಜ್ಯದ ಆಯುಷ್ ಇಲಾಖೆಯ ಅಡಿಯಲ್ಲಿ ಬರುವ ಖಾಸಗಿ ಆಯುರ್ವೇದ, ಹೋಮಿಯೋಪತಿ, ಯುನಾನಿ, ಯೋಗ ಮತ್ತು ನ್ಯಾಚುರೋಪತಿ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ/ಸ್ನಾತಕ ಪೂರ್ವ ಕೋರ್ಸುಗಳ ಪ್ರವೇಶ ನೀತಿಯಲ್ಲಿ ಸೀಟುಗಳ ಹಂಚಿಕೆ ಮತ್ತು ಪ್ರವೇಶ/ಬೋಧನಾ ಶುಲ್ಕವನ್ನು ನಿಗದಿಗೊಳಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಆಕುಕ 142 ಪಿಟಿಡಿ 2009, ದಿನಾಂಕ: 23-05-2009.
2) ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ : ಆಯುಷ್/03/ಅಭಿವೃದ್ಧಿ(2)/2010-11, ದಿನಾಂಕ : 04-05-2010 & 07-06-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರಲ್ಲಿನ ಸರ್ಕಾರದ ಆದೇಶದಲ್ಲಿ, 2009-10 ನೇ ಸಾಲಿನಲ್ಲಿ ಆಯುಷ್ ಇಲಾಖೆ ಅಡಿಯಲ್ಲಿ ಬರುವ ರಾಜ್ಯದ ಖಾಸಗಿ ಆಯುರ್ವೇದ, ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕಪೂರ್ವ ಕೋರ್ಸುಗಳ ಪ್ರವೇಶ ಪರೀಕ್ಷೆ, ಸೀಟುಗಳ ಹಂಚಿಕೆ ಮತ್ತು ಬೋಧನಾ ಶುಲ್ಕವನ್ನು ನಿಗದಿಗೊಳಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (2)ರ ಆಯುಷ್ ನಿರ್ದೇಶಕರ ಪತ್ರಗಳಲ್ಲಿ, 2010-11ನೇ ಸಾಲಿನಲ್ಲಿ ಸರ್ಕಾರಿ/ಖಾಸಗಿ ಆಯುಷ್ ವೈದ್ಯಕೀಯ ಸಂಸ್ಥೆಗಳಿಗೆ ಸ್ನಾತಕಪೂರ್ವ ಕೋರ್ಸಿಗೆ ಹಾಗೂ ಸ್ನಾತಕೋತ್ತರ ಕೋರ್ಸಿಗೆ ಸೀಟು ಹಂಚಿಕೆ/ಬೋಧನಾ ಶುಲ್ಕವನ್ನು ನಿಗದಿಪಡಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 131 ಪಿಟಿಡಿ 2010 ಬೆಂಗಳೂರು, ದಿನಾಂಕ : 06-07-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2010-11 ನೇ ಸಾಲಿನಲ್ಲಿ ಆಯುಷ್ ಇಲಾಖೆ ಅಡಿಯಲ್ಲಿ ಬರುವ ರಾಜ್ಯದ ಖಾಸಗಿ ಆಯುರ್ವೇದ, ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕಪೂರ್ವ ಕೋರ್ಸುಗಳ ಪ್ರವೇಶ ಪರೀಕ್ಷೆ, ಸೀಟುಗಳ ಹಂಚಿಕೆ ಮತ್ತು ಬೋಧನಾ ಶುಲ್ಕವನ್ನು ನಿಗದಿಗೊಳಿಸಿ ಈ ಕೆಳಗಿನಂತೆ ಸರ್ಕಾರವು ಆದೇಶಿಸಿದೆ.

1. ಸ್ನಾತಕ ಪೂರ್ವ ಕೋರ್ಸುಗಳಿಗೆ ಸಂಬಂಧಪಟ್ಟಂತೆ, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಮತ್ತು ಅನುದಾನರಹಿತ ಕಾಲೇಜುಗಳಲ್ಲಿ ಃಂಒಖ, ಃಊಒಖ, ಃಗಒಖ, ಃಓಜಖ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಸೀಟುಗಳ ಹಂಚಿಕೆ ಮತ್ತು ಆಯ್ಕೆಯನ್ನು ಈ ಕೆಳಗಿನಂತೆ ಮುಂದುವರೆಸಲು ಆದೇಶಿಸಿದೆ.

ಸೀಟುಗಳ ಹಂಚಿಕೆ	ಸರ್ಕಾರಿ ಸೀಟುಗಳು	ಆಡಳಿತ ಮಂಡಳಿಯ ಸೀಟುಗಳು
(1) ಅನುದಾನಿತ ಕಾಲೇಜುಗಳಿಗೆ	80% (ಏಇಂ ಮೂಲಕ)	20% (ಮೆರಿಟ್ ಮೂಲಕ)
(2) ಅನುದಾನರಹಿತ ಕಾಲೇಜುಗಳಿಗೆ	20%(ಏಇಂ ಮೂಲಕ)	80% (ಮೆರಿಟ್ ಮೂಲಕ)

2.ಸ್ನಾತಕ ಪೂರ್ವ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಶುಲ್ಕವನ್ನು ಪ್ರತಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲು ಆದೇಶಿಸಿದೆ.

ಅ) ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ	ರೂ. 18,590–00(ಹದಿನೆಂಟು ಸಾವಿರದ ಐದು ನೂರ ತೊಂಬತ್ತು ರೂಪಾಯಿಗಳು ಮಾತ್ರ) (ಈ ಮೊತ್ತದಲ್ಲಿ ರೂ. 4410/- (ನಾಲ್ಕು ಸಾವಿರದ ನಾಲ್ಕು ನೂರ ಹತ್ತು ರೂಪಾಯಿಗಳನ್ನು ಮಾತ್ರ ಅಭಿವೃದ್ಧಿ ಶುಲ್ಕವೆಂದು ಪರಿಗಣಿಸುವುದು)
ಆ) ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ	ರೂ. 28,590–00 (ಇಪ್ಪತ್ತೆಂಟು ಸಾವಿರದ ಐದು ನೂರ ತೊಂಬತ್ತು ರೂಪಾಯಿಗಳು ಮಾತ್ರ)
ಇ) ಆಡಳಿತ ಮಂಡಳಿ ಸೀಟುಗಳಿಗೆ	ರೂ. 1,00,000–00 (ಒಂದು ಲಕ್ಷದವರೆಗೆ)

3.ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಸೀಟುಗಳ ಹಂಚಿಕೆಯನ್ನು ಯಥಾವತ್ತಾಗಿ ಮುಂದುವರೆಸಲಾಗಿದೆ.

ಸೀಟುಗಳ ಹಂಚಿಕೆ	ಸರ್ಕಾರಿ ಸೀಟುಗಳು	ಆಡಳಿತ ಮಂಡಳಿಯ ಸೀಟುಗಳು
(1) ಅನುದಾನಿತ, ಅನುದಾನರಹಿತ ಕಾಲೇಜುಗಳಲ್ಲಿ	25% (ಕಉಇಖ ಮೂಲಕ)	75% (ಅಅಖಒ/ಅಅಊ ಮಾರ್ಗಸೂಚಿಯ ಆಧಾರದ ಮೇಲೆ ಹಾಗೂ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವುದು)

4.ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳಿಂದ ಈ ಕೆಳಗಿನಂತೆ ಶುಲ್ಕವನ್ನು ವಸೂಲಿ ಮಾಡಲು ಆದೇಶಿಸಲಾಗಿದೆ.

ಶುಲ್ಕ :	
(1) ಅನುದಾನಿತ, ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ	ರೂ. 50,000–00 ಗಳು – 1 ವರ್ಷಕ್ಕೆ (ಐವತ್ತು ಸಾವಿರ)
(2) ಅನುದಾನಿತ, ಅನುದಾನರಹಿತ ಕಾಲೇಜು ಆಡಳಿತ ಮಂಡಳಿಯ ಸೀಟುಗಳಿಗೆ	ರೂ. 2.00 ಲಕ್ಷಗಳು – 1 ವರ್ಷಕ್ಕೆ (ಎರಡು ಲಕ್ಷಗಳು) (ಮೇಲ್ಮಿತಿ)

5. ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು ಇಲ್ಲಿ ಆಯುರ್ವೇದ ಸಿದ್ಧಾಂತ ವಿಷಯದಲ್ಲಿ ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ಸೀಟುಗಳಿಗೆ ಕೇಂದ್ರ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಸಹಾಯಧನ ನೀಡಿರುವುದರಿಂದ, ಶೇಕಡಾ 50 ರಷ್ಟು ಸೀಟುಗಳನ್ನು ಕರ್ನಾಟಕೇತರ ಅಭ್ಯರ್ಥಿಗಳಿಗೆ ಮೀಸಲಿಡಲು ಸೂಚಿಸಿದೆ.
6. ಸರ್ಕಾರಿ ಆಯುರ್ವೇದ ಕಾಲೇಜುಗಳಲ್ಲಿ ಸ್ನಾತಕೋತ್ತರ ಮತ್ತು ಸ್ನಾತಕ ಪೂರ್ವ ಕೋರ್ಸುಗಳಿಗೆ ಸಂಬಂಧಪಟ್ಟಂತೆ, ಸೀಟುಗಳ ಹಂಚಿಕೆ, ಪ್ರವೇಶದ ಆಯ್ಕೆ ಹಾಗೂ ಶುಲ್ಕವನ್ನು ಜಾರಿಯಲ್ಲಿರುವ ನಿಯಮದಂತೆ ಮುಂದುವರೆಸಲಾಗಿದೆ.
7. ಈ ಸೀಟುಗಳಿಗೆ ಅಖಿಲ ಭಾರತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲು ಸೂಚಿಸಲಾಗಿದೆ.
8. ಮೇಲಿನ ಕೋರ್ಸುಗಳಲ್ಲಿ ಉಳಿದ ಶೇಕಡಾ 50 ರಷ್ಟು ಸೀಟುಗಳು ಹಾಗೂ ಸ್ನಾತಕೋತ್ತರ ಇತರೆ ಎಲ್ಲಾ ಕೋರ್ಸಿನ ಸೀಟುಗಳನ್ನು ಕರ್ನಾಟಕದಲ್ಲಿ ಜನಿಸಿ ಮತ್ತು ಕರ್ನಾಟಕದಲ್ಲಿರುವ ಯಾವುದೇ ವಿಶ್ವವಿದ್ಯಾಲಯದಲ್ಲಿ ಪದವಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಮೀಸಲಿಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1813

ಆರ್.ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಶಿಕ್ಷಣ ಸಚಿವಾಲಯ

ವಿಷಯ : ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೇಲೆ ಉಪನ್ಯಾಸಕರ ಸೇವೆಯನ್ನು ಪಡೆಯುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಇಡಿ 88 ಟಿಪಿಯು 2009, ದಿನಾಂಕ: 16–06–2009.
2) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ : ಪಪೂಶಿಇ/ಸಿಬ್ಬಂದಿ–2/ಅತಿಥಿ/03/2010–11.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 16–06–2009ರ ಸರ್ಕಾರದ ಆದೇಶದಲ್ಲಿ 2009–10ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಆಯಾಯ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಮಾಸಿಕ ಗೌರವಧನ

ಆಧಾರದ ಮೇಲೆ ನಿಯಮಾನುಸಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಒಟ್ಟು 1348 ಉಪನ್ಯಾಸಕರ ಹುದ್ದೆಗಳು ಮತ್ತು 2010-11 ನೇ ಶೈಕ್ಷಣಿಕ ಸಾಲಿನಿಂದ 437 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ಸಂಯೋಜನೆ ಮತ್ತು 270 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಾಣಿಜ್ಯ ಸಂಯೋಜನೆಯನ್ನು ಹೊಸದಾಗಿ ಪ್ರಾರಂಭಿಸುವ ನಿಮಿತ್ತ ಹೊಸದಾಗಿ ಸೃಜಿಸಲಾದ 2018 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಮತ್ತು ಅರ್ಹ ಪ್ರೌಢಶಾಲಾ ಸಹಶಿಕ್ಷಕರಿಂದ ಬಡ್ತಿಮೂಲಕ ತುಂಬುವವರೆಗೆ ಅಥವಾ 2010-11ರ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಮಾಸಿಕ ಗೌರವಧನದ ಮೇಲೆ ಅತಿಥಿ ಉಪನ್ಯಾಸಕರನ್ನು ಆಯಾ ಕಾಲೇಜಿನ ಪ್ರಾಂಶುಪಾಲರು ಹಾಗೂ ಹಿರಿಯ ಉಪನ್ಯಾಸಕರು ಇರುವ ಸಮಿತಿಗೆ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಅಧಿಕಾರವನ್ನು ನೀಡುವಂತೆ ಪ್ರಸ್ತಾಪಿಸಿರುವುದನ್ನು ಪರಿಶೀಲಿಸಿ 2010-11 ನೇ ಶೈಕ್ಷಣಿಕ ಸಾಲಿನಲ್ಲಿ ಗೌರವಧನದ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಿ ಸರ್ಕಾರ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 121 ಡಿಜಿಡಿ 2010, ಬೆಂಗಳೂರು, ದಿನಾಂಕ 1ನೇ ಜುಲೈ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯನ್ನು ನಿವಾರಿಸಲು ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕವಾಗಿ ಆಯಾ ವಿಷಯಗಳಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳಿಂದ, ಕಾರ್ಯಭಾರಕ್ಕನುಗುಣವಾಗಿ ವಾರದಲ್ಲಿ ನಾಲ್ಕು ಘಂಟೆಗಳಂತೆ ತಿಂಗಳಲ್ಲಿ 16 ಗಂಟೆಗಳಿಗೆ, ತಿಂಗಳಿಗೆ ಗರಿಷ್ಠ ರೂ. 2400/- (ಎರಡು ಸಾವಿರದ ನಾಲ್ಕು ನೂರು) ಹಾಗೂ ವಾರದಲ್ಲಿ 8 ಗಂಟೆಗಳಂತೆ ತಿಂಗಳಿಗೆ 32 ಗಂಟೆಗಳಿಗೆ, ತಿಂಗಳಿಗೆ ಗರಿಷ್ಠ ರೂ. 4,800/-ಗಳಿಗೆ (ನಾಲ್ಕು ಸಾವಿರದ ಎಂಟುನೂರು) ಮೀರದಂತೆ ಗೌರವಧನವನ್ನು ಪಾವತಿಸುವ ಆಧಾರದಲ್ಲಿ ಉಪನ್ಯಾಸಕರ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗಿ ಅವರ ಸೇವೆಯನ್ನು ಪಡೆಯಲು ಸರ್ಕಾರದ ಮಂಜೂರಾತಿ ನೀಡಿದೆ.

ಷರತ್ತುಗಳು :

1. ಆಯಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಪದವೀಧರರ ಸೇವೆಯನ್ನು ಆಯಾ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ತಾತ್ಕಾಲಿಕವಾಗಿ ನಿಗದಿತ ಅವಧಿಗೆ ಮಾತ್ರ ಮಾಸಿಕ ಗೌರವಧನದ ಪಾವತಿಯ ಮೇಲೆ ನೇಮಕಾತಿ ಮಾಡಿಕೊಳ್ಳತಕ್ಕದ್ದು.
2. ಮಂಜೂರಾದ ಹಾಗೂ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳಿಗೆ ಮಾತ್ರ ಅತಿಥಿ ಉಪನ್ಯಾಸಕರ ಸೇವೆಯನ್ನು ಉಪಯೋಗಿಸಿಕೊಳ್ಳತಕ್ಕದ್ದು.
3. ಪ್ರತಿ ಅತಿಥಿ ಉಪನ್ಯಾಸಕರಿಗೆ ವಾರದಲ್ಲಿ ಗರಿಷ್ಠ 08 ಗಂಟೆಗಳ ಕಾರ್ಯಭಾರ ಮಾತ್ರ ನಿರ್ವಹಿಸಲು ಅನುಮತಿ ನೀಡತಕ್ಕದ್ದು.
4. ಈ ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂ ಉಪನ್ಯಾಸಕರ ನೇಮಕಾತಿ ಆಗುವವರೆಗೆ ಅಥವಾ 2010-11ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಇವೆರಡರಲ್ಲಿ ಯಾವುದೂ ಮೊದಲೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳತಕ್ಕದ್ದು.
5. ಸರ್ಕಾರದ ನಿಯಮಗಳನ್ವಯ ಈ ಅವಧಿಯಲ್ಲಿ ಖಾಯಂ ಉಪನ್ಯಾಸಕರು ನೇಮಕಾತಿ ಹೊಂದಿ ಕರ್ತವ್ಯಕ್ಕೆ ಹಾಜರಾದ ತಕ್ಷಣದಿಂದ ಅತಿಥಿ ಉಪನ್ಯಾಸಕರ ಕಾರ್ಯನಿರ್ವಹಣೆಯು ತಂತಾನೆ ರದ್ದಾಗುತ್ತದೆ.
6. ಉಪನ್ಯಾಸಕರೇ ಇಲ್ಲದಿರುವ ಸ್ಥಳದಲ್ಲಿ ಹಾಗೂ ನಿಯೋಜನೆಯಂತಹ ಬದಲಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲದಿರುವ ಸ್ಥಳದಲ್ಲಿ ಮಾತ್ರ ಅತಿಥಿ ಉಪನ್ಯಾಸಕರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳತಕ್ಕದ್ದು.
7. ಆಯಾಯ ವಿಷಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಲು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಮುಂದೆ ಬಂದಲ್ಲಿ ಅಂತಹವರ ಪೈಕಿ ಆಯಾ ವಿಷಯದಲ್ಲಿನ ಸ್ನಾತಕೋತ್ತರ ಪದವಿಯಲ್ಲಿ ಹೆಚ್ಚಿನ ಅಂಕ ಪಡೆದ ಅಭ್ಯರ್ಥಿಯ ಸೇವೆಯನ್ನು ಆಯಾ ಕಾಲೇಜಿನ ಪ್ರಾಂಶುಪಾಲರು ಹಾಗೂ ಆಯಾ ಕಾಲೇಜಿನ ಹಿರಿಯ ಉಪನ್ಯಾಸಕರು ಇರುವ ಸಮಿತಿಯ ಮೂಲಕ ಆಯ್ಕೆ ಮಾಡಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯತಕ್ಕದ್ದು.
8. ಪ್ರತಿ ಅತಿಥಿ ಉಪನ್ಯಾಸಕರಿಗೆ ಒಂದು ಗಂಟೆಯ ಬೋಧನಾ ಅವಧಿಗೆ ರೂ. 150-00 ರಂತೆ (ರೂ. ಒಂದು ನೂರಾ ಐವತ್ತು ಮಾತ್ರ) ಗೌರವಧನ ನೀಡಬಹುದು. ವಾರದಲ್ಲಿ ಗರಿಷ್ಠ 08 ಗಂಟೆಗಳ ಕಾರ್ಯಭಾರವನ್ನು ಮಾತ್ರ ಅತಿಥಿ ಉಪನ್ಯಾಸಕರಿಗೆ ವಹಿಸತಕ್ಕದ್ದು. ವಾರದಲ್ಲಿ 04 ಗಂಟೆಗಳಂತೆ ತಿಂಗಳಲ್ಲಿ 16 ಗಂಟೆಗಳ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಗರಿಷ್ಠ ರೂ. 2400-00 ಗಳನ್ನು ಹಾಗೂ ವಾರದಲ್ಲಿ 08 ಗಂಟೆಗಳಂತೆ ತಿಂಗಳಲ್ಲಿ 32 ಗಂಟೆಗಳ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ತಿಂಗಳಿಗೆ ಗರಿಷ್ಠ ರೂ. 4800-00 ಗಳಿಗೆ ಮೀರದಂತೆ ಗೌರವಧನವನ್ನು ನಿಗದಿಪಡಿಸತಕ್ಕದ್ದು. ಈ ಗೌರವಧನದ ಮೊತ್ತವನ್ನು ಆಯಾ ಕಾಲೇಜುಗಳ ಪ್ರಾಚಾರ್ಯರೇ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಿಂದ ಪಡೆದು ನಿಯಮಾನುಸಾರ ವಿತರಿಸತಕ್ಕದ್ದು.
9. ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳುವಾಗ ಅವರಿಗೆ ಸಕ್ಷಮ ಪ್ರಾಧಿಕಾರದ ಆದೇಶವಿಲ್ಲದೆ ಯಾವುದೇ ಆದೇಶವನ್ನು ನೀಡಬಾರದು. ಗೌರವಧನ ವಿತರಣೆಗೆ ಸೂಕ್ತ ಸ್ವೀಕೃತಿಯನ್ನು ಪಡೆಯತಕ್ಕದ್ದು.
10. ಈ ರೀತಿ ಆಯ್ಕೆ ಆಗುವ ಅತಿಥಿ ಉಪನ್ಯಾಸಕರು, ಅತಿಥಿ ಉಪನ್ಯಾಸಕರಾಗಿ ಸಲ್ಲಿಸುವ ಸೇವೆಯು ಇತರೆ ಯಾವುದೇ ಸರ್ಕಾರಿ ಸೇವಾ ಸಕ್ರಮಾತಿಗೆ ಪರಿಗಣಿಸತಕ್ಕದ್ದಲ್ಲ.

ಈ ಗೌರವಧನವನ್ನು ವೇತನ ಲೆಕ್ಕ ಶೀರ್ಷಿಕೆ "2202-02-109-0-13 (ಯೋಜನೇತರ)" ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ : 23-04-2010ರ ಅನಧಿಕೃತ ಟಿಪ್ಪಣಿ ಸಂಖ್ಯೆ 252 ವೆಚ್ಚ 2010 ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಸೇವಾ ನಿಯಮ) ಶಾಖೆಯ ದಿನಾಂಕ : 04-06-2010ರ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿ.ಆ.ಸು.ಇ. 211 ಸೇನಿಎ 2010 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1814

ಎಸ್.ಹೆಚ್. ಕುರಿಯವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಪದವಿ ಪೂರ್ವ)

ಆರ್ಥಿಕ ಸಚಿವಾಲಯ

ವಿಷಯ : 2009-10ನೇ ಸಾಲಿನ ಯೋಜನೇತರ ಲೆಕ್ಕಶೀರ್ಷಿಕೆ ಅಡಿ ವೇತನೇತರ ಉಪ ಶೀರ್ಷಿಕೆಗಳಲ್ಲಿ ಉಳಿತಾಯವಾಗಿರುವ ಅನುದಾನವನ್ನು ಆದ್ಯರ್ಪಣೆ ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಸಂಪಾದಕರು, ಕರ್ನಾಟಕ ಗೆಜೆಟಿಯರ್ ಇಲಾಖೆ ಬೆಂಗಳೂರು

ಪ್ರಸ್ತಾವನೆ :

ಮುಖ್ಯ ಸಂಪಾದಕರು, ಕರ್ನಾಟಕ ಗೆಜೆಟಿಯರ್ ಬೆಂಗಳೂರು ರವರು ಮೇಲೆ ಓದಲಾದ ತಮ್ಮ ಪತ್ರದಲ್ಲಿ 2009-10ನೇ ಸಾಲಿನ ಕರ್ನಾಟಕ ಗೆಜೆಟಿಯರ್ ಇಲಾಖೆಗೆ ಲೆಕ್ಕಶೀರ್ಷಿಕೆ 3454-02-110-0-01-051 ಯೋಜನೇತರಡಿ ಉಳಿತಾಯವಾಗಿರುವ ರೂ. 4.33 ಲಕ್ಷಗಳು ಉಳಿತಾಯವಾಗಿರುವುದನ್ನು ಸರ್ಕಾರಕ್ಕೆ ಆಧ್ಯರ್ಪಿಸಿಕೊಳ್ಳುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 396 ವೆಚ್ಚ-9 2010, ಬೆಂಗಳೂರು, ದಿನಾಂಕ 31-03-2010

2009-10ನೇ ಸಾಲಿನ ಆಯವ್ಯಯ ಕರ್ನಾಟಕ ಗೆಜೆಟಿಯರ್ ಇಲಾಖೆಗೆ ಲೆಕ್ಕ ಶೀರ್ಷಿಕೆ 3454-02-110-0-01-051 ಯೋಜನೇತರಡಿ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವಂತೆ ಉಳಿತಾಯವಾಗಿರುವ ರೂ. 4.33 ಲಕ್ಷ (ನಾಲ್ಕು ಲಕ್ಷ ಮುವತ್ಮೂರು ಸಾವಿರ) ಸರ್ಕಾರಕ್ಕೆ ಆಧ್ಯರ್ಪಿಸಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಹೇಮರಾಜು
ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವೆಚ್ಚ-3&9)

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: 396 ವೆಚ್ಚ-9-10 ದಿ: 31-03-2010

ಕ್ರ.ಸಂ	ಆಯವ್ಯಯ ಲೆಕ್ಕಶೀರ್ಷಿಕೆ	2009-10ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನ	2009-10ನೆ ಸಾಲಿನಲ್ಲಿ ಆದ ಒಟ್ಟು ಖರ್ಚು	ಅಧ್ಯರ್ಪಣಾ ಮಾಡಿದ ಮೊಬಲಗು	ಉಳಿತಾಯಕ್ಕೆ ಕಾರಣ	ಷರಾ
1)	3454-02-110-0-10-051 ಯೋಜನೇತರ-ಜಿಲ್ಲಾ ಗ್ಯಾಜೆಟಿಯರ್‌ಗಳ ಪರಿಷ್ಕರಣೆ	12.85 ಖ-5.82 (ಮನರ್ ವಿನಿಯೋಗ)	2.70	4.33	ಈ ಅನುದಾನದಲ್ಲಿ 014 ಇತರೆ ಭತ್ಯೆಗೆ 2.38 ಲಕ್ಷ ರೂ.ಗಳನ್ನು ಮನರ್ ವಿನಿಯೋಗ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರದಿಂದ ಸಿಬ್ಬಂದಿ ವೇತನಕ್ಕೆ ಮಾತ್ರ ಮನರ್ ವಿನಿಯೋಗ ಆದೇಶ ನೀಡಿರುತ್ತಾರೆ. ಪ್ರಸ್ತುತ ಜಾರಿಯಲ್ಲಿರುವ ಆರ್ಥಿಕ ಮಿತವ್ಯಯ ನೀತಿಯ ಮೇರೆಗೆ ಕಛೇರಿಗೆ ಯಾವುದೇ ಪೀಠೋಪಕರಣ ಇತ್ಯಾದಿ ಖರೀದಿಸಿಲ್ಲ ಆದ್ದರಿಂದ, 4.33 ಲಕ್ಷ ರೂ.ಗಳು ಉಳಿತಾಯವಾಗಿರುತ್ತದೆ.	ಸರ್ಕಾರದಿಂದ ಮನರ್ ವಿನಿಯೋಗ ಆದೇಶ ಸ್ವೀಕೃತವಾಗದ ಕಾರಣ ಹಾಗೂ ಆರ್ಥಿಕ ಮಿತವ್ಯಯ ನೀತಿಯಂತೆ ಉಳಿತಾಯವಾಗಿದೆ.

ಪಿ.ಆರ್. 1823

ಎನ್. ಹೇಮರಾಜು
ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವೆಚ್ಚ-3&9)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2010-11ನೇ ಸಾಲಿಗೆ ಕಿಯೋನಿಕ್ಸ್ ಸಂಸ್ಥೆಗೆ ಹುಬ್ಬಳ್ಳಿಯ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : (1) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 35 ಅಡವಿ 2010 ದಿನಾಂಕ 15-04-10

(2) ನಿರ್ದೇಶಕರು, [ಆಪರೇಷನ್], ಕಿಯೋನಿಕ್ಸ್ ರವರ ಪತ್ರ ಸಂಖ್ಯೆ: KSEDC/ INFRA/ITD/10-11 ದಿನಾಂಕ: 26-05-2010.

ಪ್ರಸ್ತಾವನೆ :

2010-11ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451-00-090-2-01 ಮಾಹಿತಿ ತಂತ್ರಜ್ಞಾನ-ಉನ್ನತೀಕರಣ ಮತ್ತು ಅಭಿವೃದ್ಧಿ 059 ಇತರೆ ಖರ್ಚು [ಯೋಜನೆ]" ರಡಿಯಲ್ಲಿ ರೂ. 1000.00 ಲಕ್ಷಗಳ ಅನುದಾನವು ಒದಗಣೆಯಾಗಿದ್ದು, ಅದರಲ್ಲಿ ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್

ನಿರ್ವಹಣೆಗಾಗಿ ಕಿಯೋನಿಕ್ಸ್ ಸಂಸ್ಥೆಗೆ ರೂ. 30.00 ಲಕ್ಷ [ರೂ. ಮೂವತ್ತು ಲಕ್ಷಗಳು ಮಾತ್ರ] ಗಳ ಅನುದಾನವನ್ನು ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿದೆ.

ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು [ಆಪರೇಷನ್], ಕಿಯೋನಿಕ್ಸ್, ಬೆಂಗಳೂರು ಇವರು ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ಮೇಲೆ [1]ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆಯಾಗಿರುವ ರೂ. 30.00 ಲಕ್ಷಗಳ ಅನುದಾನವನ್ನು ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕಿಯೋನಿಕ್ಸ್ ಸಂಸ್ಥೆಗೆ ರೂ. 30.00 ಲಕ್ಷ [ರೂ. ಮೂವತ್ತು ಲಕ್ಷಗಳು ಮಾತ್ರ] ಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 84 ಅಡವಿ 2010, ಬೆಂಗಳೂರು, ದಿನಾಂಕ 14-07-2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2010-11ನೇ ಸಾಲಿಗೆ ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ರೂ. 30.00 ಲಕ್ಷಗಳ (ಮೂವತ್ತು ಲಕ್ಷ ರೂ.ಗಳು ಮಾತ್ರ) ಅನುದಾನವನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ [ಕಿಯೋನಿಕ್ಸ್] ಸಂಸ್ಥೆಗೆ ಪಾವತಿಸಲು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಸೆಳೆದು [ಡ್ರಾ ಮಾಡಿ] ವಿತರಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'3451-00-090-2-01 ಮಾಹಿತಿ ತಂತ್ರಜ್ಞಾನದ ಉನ್ನತೀಕರಣ ಮತ್ತು ಅಭಿವೃದ್ಧಿ-059-ಇತರೆ ಖರ್ಚು (ಯೋಜನೆ)'** ಇದರ ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರು ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ ನಿರ್ದೇಶಕರು [ನಿರ್ವಹಣೆ] ರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶಗಳ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16.5.08 ಇದರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1824

ಎಂ.ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2010-11ನೇ ಸಾಲಿಗೆ ಕೆಬಿಟ್ಸ್ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : (1) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 35 ಆಡವಿ 2010 ದಿನಾಂಕ 15-04-10

(2) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 54 ಆಡವಿ 2010 (2) ದಿನಾಂಕ: 06-05-2010.

(3) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಡಿಐಟಿ/ಎಸಿಟಿ-1/16/ಕೆಬಿಟ್ಸ್/2010-11 ದಿನಾಂಕ: 02-07-2010.

ಪ್ರಸ್ತಾವನೆ :

2010-11ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451-00-090-2-01 ಮಾಹಿತಿ ತಂತ್ರಜ್ಞಾನ-ಉನ್ನತೀಕರಣ ಮತ್ತು ಅಭಿವೃದ್ಧಿ 059 ಇತರೆ ಖರ್ಚು [ಯೋಜನೆ]" ರಡಿಯಲ್ಲಿ ರೂ. 1000.00 ಲಕ್ಷಗಳ ಅನುದಾನವನ್ನು ಒದಗಣೆ ಮಾಡಲಾಗಿದೆ. ಅದರಲ್ಲಿ ಬೆಂಗಳೂರು ಐಟಿ-ಬಿಜ್ 2010 ಮತ್ತು ಬೆಂಗಳೂರು ಬಯೋ 2010 ಈವೆಂಟ್‌ಗಳು ಸೇರಿದಂತೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗಳಿಗಾಗಿ ರೂ. 300.00 ಲಕ್ಷಗಳನ್ನು ಮೇಲೆ [1]ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ 06-05-2010ರ ಸರ್ಕಾರಿ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗಳಿಗಾಗಿ ರೂ. 75.00 ಲಕ್ಷಗಳ ಅನುದಾನವನ್ನು 2010-11ನೇ ಸಾಲಿನಲ್ಲಿ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಜಿಮ್ 2010 ಮತ್ತು ಸಾಧನಾ ಸಮಾವೇಶಕ್ಕಾಗಿ ಕೆಬಿಟ್ಸ್‌ನಿಂದ ಭರಿಸಲ್ಪಟ್ಟ ವೆಚ್ಚಗಳ ಬಾಬ್ತು ರೂ. 150.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ರೂ. 100.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 54 ಅಡವಿ 2010, ಬೆಂಗಳೂರು, ದಿನಾಂಕ 15-07-2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಜಿಮ್ 2010 ಮತ್ತು ಸಾಧನಾ ಸಮಾವೇಶಕ್ಕಾಗಿ ಕೆಬಿಟ್ಸ್‌ನಿಂದ ಭರಿಸಲ್ಪಟ್ಟ ವೆಚ್ಚಗಳ ಬಾಬ್ತು ರೂ. 100.00 ಲಕ್ಷಗಳ (ನೂರು ಲಕ್ಷಗಳು ಮಾತ್ರ) ಅನುದಾನವನ್ನು 2010-11ನೇ ಸಾಲಿನಲ್ಲಿ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ

ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಗೆ ಪಾವತಿಸಲು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವಿತರಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'3451-00-090-2-01 ಮಾಹಿತಿ ತಂತ್ರಜ್ಞಾನದ ಉನ್ನತೀಕರಣ ಮತ್ತು ಅಭಿವೃದ್ಧಿ-059-ಇತರೆ ವೆಚ್ಚ (ಯೋಜನೆ)'** ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರು ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು

ಈ ಆದೇಶವನ್ನು ಸರ್ಕಾರಿ ಆದೇಶಗಳ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16.5.2008 ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1825

ಎಂ.ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ಲೆಕ್ಕ ಶೀರ್ಷಿಕೆ 8235-00-111-0-02 "Public Contributions to Calamity Relief" ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
(1) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 23 ಟಿಎಆರ್ 2009 ದಿನಾಂಕ 6-4-2010.
(2) ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಟಿಎನ್‌ಆರ್ 2010, ದಿನಾಂಕ: 15-4-2010.
(3) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/3893/2010 ದಿನಾಂಕ: 02-07-2010 ಮತ್ತು ಟಿಪ್ಪಣಿ ಸಂಖ್ಯೆ:-ಮುಮಕಾ/3894/2010, ದಿನಾಂಕ: 2-7-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಆಸರೆ ಯೋಜನೆ ಅಡಿಯಲ್ಲಿ ನೆರೆ ಪೀಡಿತ ಜಿಲ್ಲೆಗಳಲ್ಲಿ ಮನೆ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ಮಂಡಳಿ ರಾಜೀವ್‌ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ಮಂಡಳಿ ಹಾಗೂ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್,- ಇವರುಗಳಿಗೆ ಲೆಕ್ಕ ಶೀರ್ಷಿಕೆ 8235-00-111-0-02 "ಕಣಛಟುಛಿ ಅಠಿಟಣಡುಛಿಣಣುಂಟಿ ಣಾ ಅಚಿಟಚಿಟುಣಥಿ ಖಜಟುಜಜಿ" ಯಿಂದ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ನೇರವಾಗಿ ಹಣ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಸರ್ಕಾರದ ವತಿಯಿಂದ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, (ಕರ್ನಾಟಕ ಭೂ ಸೇನಾ ನಿಗಮ) ಇವರು ಆಸರೆ ಯೋಜನೆ ಅಡಿಯಲ್ಲಿ 11209 ಮನೆಗಳನ್ನು ನಿರ್ಮಿಸಲು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಅನುಮೋದನೆ ನೀಡಿರುತ್ತಾರೆ. ಇದಕ್ಕಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಸರ್ಕಾರದ ಆದೇಶದಲ್ಲಿ ರೂ. 20-00 ಕೋಟಿಗಳ ಹಣವನ್ನು ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಗೃಹ ಮಂಡಳಿ ಮೂಲಕ 3699 ಮನೆಗಳನ್ನು ನಿರ್ಮಿಸಲು ಆದೇಶಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಕರ್ನಾಟಕ ಗೃಹ ಮಂಡಳಿಗೆ ರೂ. 5-00 ಕೋಟಿ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಆಸರೆ ಕಾರ್ಯಕ್ರಮದ ತ್ವರಿತ ಪ್ರಗತಿಗಾಗಿ ಕರ್ನಾಟಕ ಗೃಹ ಮಂಡಳಿ ಮತ್ತು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ರವರು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದರ ಮೇರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ಮುಖ್ಯಮಂತ್ರಿಗಳ ಕಾರ್ಯದಶಿಯವರ ದಿನಾಂಕ: 2-7-2010ರ ಟಿಪ್ಪಣಿಗಳಲ್ಲಿ ಕರ್ನಾಟಕ ಗೃಹ ಮಂಡಳಿಗೆ ರೂ. 15.00 ಕೋಟಿ ಮತ್ತು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಸಂಸ್ಥೆಗೆ ರೂ. 40.00 ಕೋಟಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಟಿಎನ್‌ಆರ್ 2010 (ಭಾ) ಬೆಂಗಳೂರು, ದಿನಾಂಕ: 7-7-2010

ಪ್ರಸಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಸರೆ ಯೋಜನೆ ಅಡಿಯಲ್ಲಿ ನೆರೆ ಪೀಡಿತ ಜಿಲ್ಲೆಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಕೆಳಕಂಡ ಸಂಸ್ಥೆಗಳಿಗೆ ಒಟ್ಟು ರೂ. 55-00 ಕೋಟಿಗಳನ್ನು (ರೂ. ಐವತ್ತೈದು ಕೋಟಿಗಳು ಮಾತ್ರ) ಲೆಕ್ಕ ಶೀರ್ಷಿಕೆ 8235-00-111-0-02 "Public Contributions to Calamity Relief" ಅಡಿಯಲ್ಲಿ ಬಿಡುಗಡೆ ಮಾಡಲು ಮಂಜುರಾತಿ ನೀಡಿದೆ.

ಕ್ರ ಸಂ.	ಸಂಸ್ಥೆ	ಬಿಡುಗಡೆ ಮಾಡಿದ ಅನುದಾನ (ರೂ. ಕೋಟಿಗಳಲ್ಲಿ)
1.	ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು	40-00
2.	ಕರ್ನಾಟಕ ಗೃಹ ಮಂಡಳಿ, ಬೆಂಗಳೂರು	15-00
	ಒಟ್ಟು	55-00

(ಒಟ್ಟು ಐವತ್ತೈದು ಕೋಟಿ ರೂ.ಗಳು ಮಾತ್ರ)

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಿಸಿದ ಸಂಸ್ಥೆಗಳ ಮುಖ್ಯಸ್ಥರು, ಅನುದಾನದ ಬಿಲ್ (ಕಚಿಥಿಜಿಝ ಖಜಿಛಿಜಿುರಿಣ) ತಯಾರಿಸಿ, ಸರ್ಕಾರದ ಕಾರ್ಯದರ್ಶಿಗಳು (ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ ಇವರಿಂದ ಮೇಲು ಸಹಿ ಪಡೆದು ರಾಜ್ಯ ಹುಜೂರ್ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಅನುದಾನವನ್ನು ಬಿಡುಗಡೆ ಮಾಡಲಾದ ಉದ್ದೇಶಕ್ಕಾಗಿಯೇ ಉಪಯೋಗಿಸತಕ್ಕದ್ದು ಹಾಗೂ ಅನುದಾನದ ವೆಚ್ಚ ಮಾಡಿದ್ದಕ್ಕೆ ಉಪಯೋಗಿತ ಪ್ರಮಾಣಪತ್ರ ಸಲ್ಲಿಸುವುದು.

ಈ ಆದೇಶವನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/3893/2010 ದಿನಾಂಕ: 2-7-2010ರ ಮತ್ತು ಟಿಪ್ಪಣಿ ಸಂಖ್ಯೆ: ಮುಮಕಾ/3894/2010 ದಿನಾಂಕ: 2-7-2010 ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1826

ಟಿ.ಗಂಗಾಧರ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ವಿ.ನಿ & ಸೇವೆಗಳು-2)

PERSONNEL AND ADMINISTRATIVE REFORMS SECRETARIAT

Sub: Establishing of 'Challenge Fund' scheme for Departments and Organizations in the Government, which come out with innovative and cost effective projects-reg.

Government Order No. DPAR 92 AAR 2009, Bangalore, Dated : 8th July 2010

In the State Budget of 2009-10 an announcement was made establishing a "Challenge Fund" of Rs. 10.00 crores (Rupees Ten crores only) for Departments and Organizations in the Government, which come out with innovative and cost effective projects. A small component of the Challenge Fund would be provided for the purpose of recognition of award to the individual. Team or the Organization, who successfully float pilot projects, found to be useful for scaling up. The Cabinet has approved the said scheme on 28-01-2010. Accordingly, the following guidelines are formulated.

Objective of the Scheme:

The objective of the Challenge Fund is to support innovative ideas of technology through implementation of scalable pilot projects, for achieving any of the following goals, from individual Government Officers/Officials/Team of Government Officers and Officials/and from Government Organization.

a) Improving quality of existing services.
b) Reduction in cost of providing services.
c) Introducing a new public service for convenience of the people
d) improving Administration/Governance.
e) Improving collection of revenues or providing of new source of revenue of Government.
f) Invite innovative ideas or technology through implementation of scalable pilot projects.

Scope of the Scheme:

The proposal should involve an innovative idea or technology. The Challenge Fund would only meet the cost of implementing the idea or the technology on a pilot scale for demonstration. The proposal should clearly state the performance parameters that would be improved and the mechanism for monitoring those parameters. While the proposal can be initiated at any level, only such proposals would be considered which are amenable for sustainability and which can be replicated on a larger scale through a competitive procurement process. The proposal should establish feasibility of scaling up of the project and vendor neutral technology. Vendor driven proposals should be discouraged.

The structure of the proposal shall be as follows:

1. Concise structure of proposal in brief.
2. To which of the objective specified in para (2) of the guideline does the proposal relate.
3. In what manner is the proposal vendor neutral.
4. List out the performance parameters indicating the baseline of the scheme, and how it will be measured.
5. State the method of scalability of the proposal.
6. Is exemption under KTPP Act required or not. If required, reasons to be provided.
7. Arrangements proposed for third party evaluation of the proposal.
8. Cost of the proposal.
9. Administrative structure for implementation (being a pilot project, creation of staff would not be expected).
10. Implementation of the projects shall be through concerned Government Departments/Government agencies only. (The details in this behalf are enclosed in Annexure-2 for information)

The pilot project proposals will be considered by the Empowered Committee under the following categories.

1. Individual Officer/Official
2. Team and
3. Organization.

On the recommendations of the Empowered Committee, Finance Department shall seek approval for exemption from KTPP Act, if required, and DPAR (Service Rules) would provide exemption from Karnataka Civil Service (Conduct Rules) if required, to the pilot projects.

Nominating authorities:

The proposal emanating at any level may be sent to Department of Personnel and Administrative Reforms (Administrative Reforms) with the recommendations of the Principal Secretary/ Secretary to Government of the concerned department and Head of Departments.

Processing of nominations:

As an approval mechanism, an Empowered Committee is hereby constituted under the Chairmanship of the Chief Secretary to Government as below:

1.	Chief Secretary to Government	-	Chairman
2.	Additional Chief Secretary to Government	-	Member
3.	Development Commissioner to Government	-	Member
4.	Principal Secretary to Government, Finance Department	-	Member
5.	Principal Secretary to Government Planning Department	-	Member
6.	principal Secretary to Government IT, BT, Science & Technology Department	-	Member
7.	principal Secretary to Government, (e-Governance)	-	Member
8.	Principal Secretary to Government, DPAR-AR	-	Member Secretary

The evaluation of the success of the pilot project could be done by an independent agency, as recommended by the empowered Committee, before any scaling up is considered. The expenditure requried for the implementation of the pilot project shall be approved by the Empowered Committee and the same will be met out of the funds allocated under Challenge Fund scheme. The implementation of the pilot projects shall be monitored by the concerned Administrative Department and reports in this behalf may be forwarded to Principal Secretary to Government, DPAR-AR along with the recommendations of the Principal Secretary/Secretary of the concerned department.

The Award:

The awards under the scheme will be conferred on the recommendations of the Empowered Committee. These awards will be conferred only after the successful implementation of the achievements and objectives of the pilot project and not prior to that. All serving officers of the State Government, either individually or as a team, or as an organization are eligible for the awards. Under team/organization, the nominated members should have been actively and directly involved in the initiative. A maximum of 15 awards would be given under the scheme, that is five awards each for individual, team and organization categories respectively. The award would carry with it:

i) A certificate

ii) A cash award

In the individual category, the award amount would be Rs. 1 Lakh (Rupee one Lakh only). In case of team, the total award would be Rs. 5 Lakhs (Rupees five Lakhs only) subject to a maximum of Rs. 1 Lakh (Rupees one Lakh only) per member (if the number of members in the team exceeds five, then the award amount should be equally distributed among all the members). The award amount for an organization would be Rs. 10 Lakhs (Rupees Ten Lakhs only).

Allocation of funds:

The expenditure on this account shall be debited to the Head of Account: 2070-00-800-0-16-059 "Administrative Reforms-Challenge fund-other expenses".

Presentation of awards:

The awards would be presented by Chief Secretary to Government of Karnataka in the function convened specially for this purpose.

Other General conditions for awards:

1. The award is subject to withdrawal, if any disciplinary action is taken against the award winner during the remainder of his/her service in the Government (in respect of individual). The award will also be withdrawn in case of organizations, if they are black listed by the State/Central Government subsequently after the announcement of the award.

2. Government reserves the right to withdraw or cancel the award and also remove the name of the award winner, individuals/teams/organizations from the Register of Awards.
3. All the individuals/teams/organizations to whom awards have been announced under this scheme shall execute an agreement as in Annexure-I before receiving the award. The agreement inter-alia provides for return of the award bestowed in case the award-winner's name/team/organization's name is subsequently removed from the Register of awards.
4. All the individual/team/organization's who have been awarded under this scheme, are not eligible for any claim, special consideration, relief, privilege or any facilities under any scheme of the Government / Boards / Company / Corporation / Authority / Statutory bodies.
5. The details of awards withdrawn or re-bestowed shall be published in the Karnataka Gazette.

This order issues with the concurrence of Finance Department vide note No. FD/270/Exp-12/10, dated: 18.06.2010.

By Order and in the name of the Governor of Karnataka

Abdul Rahaman

Under Secretary to Government,

DPAR-AR (Training).

Annexure – I To G.O. No. DPAR 92 AAR 2009, Dated: 08.07.2010

AGREEMENT

I, Sri... Recipient of the Award under the Challenge Fund Scheme, hereby declare that I/We have read and understood the terms and conditions relating to the Award. I hereby, undertake that in case the Award is withdrawn and my name is removed or cancelled from the Register of Award, the award so received/accepted by me/our team/our organization will be returned to Government.

Signatures of the Recipient of the Awards.

Dated:

Witness:

1)

2)

Annexure-2 To G.O. No: DPAR 92 AAR 2009, Dated: 08.07.2010

1. Concise structure of proposal in brief.
2. To which of the objective specified in para(2) of the guidelines does the proposal relate.
3. In what manner is the proposal vendor neutral.
4. List out the performance parameters indicating the baseline of the scheme, and how it will be measured.
5. State the method of scalability of the proposal.
6. Is exemption under KTPP Act required or not. If required, reasons to be provided.
7. Arrangements proposed for third party evaluation of the proposal.
8. Cost of the proposal.
9. Administrative structure for implementation (being a pilot project, creation of staff would not be expected).
10. Implementation of the projects shall be through concerned Government Departments/Government agencies only.

ABDUL RAHAMAN

P.R. 1827

Under Secretary to Government,

DPAR-AR (Training).

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರು ಲೋಕಾಯುಕ್ತ ಜಾಲಕ್ಕೆ ಸಿಲುಕಿರುವ ಕುರಿತು – ಆರೋಪದಿಂದ ಮುಕ್ತಗೊಳಿಸುವ ಬಗ್ಗೆ.

ಓದಲಾಗಿದೆ :
1) ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಪೊಲೀಸ್ ವಿಂಗ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂ: Lok/INV(G)/BD-5/Cr-2/2000/BLR, Dt: 15–02–2000.
2) ಅಪರ ಆರಕ್ಷಕ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಪತ್ರದಸಂ: Lok/INV(G)/ಃಆ–5/ಅಡಿ–2/2000/BLR, Dt: 10–07–2000.
3) ಸರ್ಕಾರದ ಆದೇಶ ಸಂ: ಕಂಇ 04 ಎಡಿಇ 2000, ದಿನಾಂಕ: 30–09–2000.
4) ಸರ್ಕಾರದ ಆದೇಶ ಸಂ: ಕಂಇ 04 ಎಡಿಇ 2000, ದಿನಾಂಕ 22–12–2000.
5) ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರ ಮನವಿ ದಿನಾಂಕ: 03/05–01–2001.
6) ಸರ್ಕಾರದ ಆದೇಶ ಸಂ: ಕಂಇ 04 ಎಡಿಇ 2000, ದಿನಾಂಕ: 09–03–2001.
7) ಪ್ರಿನ್ಸಿಪಲ್ ಸೆಷನ್ಸ್ ಜಡ್ಜ್, ಬೆಂಗಳೂರು ಅವರ ಆದೇಶದ ದಿನಾಂಕ: 06–01–2009.

8) ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಪತ್ರದ ದಿನಾಂಕ: 22-4-2010.

ಪ್ರಸ್ತಾವನೆ :

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್, ಪೊಲೀಸ್ ವಿಂಗ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಸಂ.(1)ರ ದಿನಾಂಕ: 15-02-2000ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿ, ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ದಿನಾಂಕ: 27-01-2000 ದಂದು ಮಾನ್ಯ ಲೋಕಾಯುಕ್ತ ಇವರು ಟ್ರಾಪ್ ಮಾಡಿರುವ ಸಂಬಂಧ, ಪ್ರಸ್ತುತ ಪ್ರಕರಣದಲ್ಲಿ ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ ವ್ಯಾಪ್ತಿಯ ಗೋವೇನಹಳ್ಳಿ ಗ್ರಾಮದ ಸರ್ವೆ ಸಂ. 2/3 ಜಮೀನಿನಲ್ಲಿ ಇರುವ ಪಹಣಿ ಕಲ್ಲನ್ನು ಫಿರ್ಯಾದುದಾರರಾದ ದೊಡ್ಡಪ್ಪ ಇವರು ಕಿತ್ತು ಹಾಕಿರುವರೆಂದು, ಆ ಕಲ್ಲನ್ನು ಪುನಃ ನಡೆಸುವ ವಿಷಯಕ್ಕೆ ಸಂಬಂಧಿಸಿದಂತೆ, ವಿವಾದಾಸ್ಪದ ಈ ಪ್ರಕರಣ ಪರಿಶೀಲನೆ ನಂತರ, ಸದರಿ ಕಲ್ಲನ್ನು ನೆಡಲು ಆದೇಶವಾಗಿರುತ್ತದೆ. ಲೋಕಾಯುಕ್ತರ ವರದಿಯ ಪ್ರಕಾರ ಶ್ರೀಮತಿ ಭಾಗ್ಯವತಮ್ಮ ಇವರು ಟ್ರ್ಯಾಪ್ ಪ್ರಕರಣದಲ್ಲಿ ಸಿಕ್ಕಿಕೊಂಡು, ಇವರು ಹಣವನ್ನು ಮುಟ್ಟದೇ ಇದ್ದ ಪ್ರಯುಕ್ತ ಅವರ ಕೈ ಪರೀಕ್ಷೆಯ ಫಲಿತಾಂಶ ನೆಗೆಟೀವ್ ಆಗಿದ್ದು, ಅವರು ಪಡೆದಿದ್ದಾರೆಂದು ಆರೋಪಿಸಲಾದ ಹಣವು ರೂ. 1,000/- ಅವರ ಮೇಜಿನ ಮೇಲೆ ಸಿಕ್ಕಿರುವುದರಿಂದ, ಅವರ ವಿರುದ್ಧ ಮೇಲ್ನೋಟಕ್ಕೆ ಆರೋಪ ಕಂಡು ಬಂದಿರುವುದರಿಂದ, ಲೋಕಾಯುಕ್ತರು, ಈ ಅಧಿಕಾರಿಯನ್ನು ಅಮಾನತ್ತಿನಲ್ಲಿರಿಸಿ, ಅವರ ಹುದ್ದೆಯ ಲೀನ್ ಬೇರೆ ಕಡೆ ನೀಡಲು ಹಾಗೂ ಇವರ ವಿರುದ್ಧ ಮುಕ್ತ ವಿಚಾರಣೆ ನಡೆಸಲು, ಲೋಕಾಯುಕ್ತ, ಅಡಿಷನಲ್ ಡೈರೆಕ್ಟರ್ ಆಫ್ ಪೊಲೀಸ್ ಇವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಸಂ.(2)ರ ದಿನಾಂಕ: 10.07.2000ರಲ್ಲಿ ಅಪರ ಆರಕ್ಷಕ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಕಛೇರಿ, ಇವರು ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ತಹಶೀಲ್ದಾರರಾಗಿದ್ದಾಗ, ಸೋವೇನಹಳ್ಳಿ ಗ್ರಾಮದ ಸಂ: 2/3ರ ಜಮೀನಿನ ವ್ಯವಹಾರದ ಬಗ್ಗೆ ಅನುಕೂಲ ಮಾಡಿಕೊಡಲು ಫಿರ್ಯಾದುದಾರರಾದ ಶ್ರೀ ತಿಮ್ಮಯ್ಯನವರಿಂದ ಅಕ್ರಮ ಸಂಭಾವನೆಯನ್ನು ಸ್ವೀಕರಿಸುತ್ತಿದ್ದರೆಂಬ ಆಪಾದನೆಯು ಮೇಲು ನೋಟಕ್ಕೆ ಸಾಬಿತಾಗಿದ್ದರಿಂದ, 1988ರ ಭ್ರಷ್ಟಾಚಾರ ವಿರೋಧ ಕಾಯ್ದೆಯ ಕಲಂ 7 ಮತ್ತು 13(1)(ಡಿ) ಪ್ರಕರಣದ ಜೊತೆಯಲ್ಲಿ ಓದಲಾದ 13(2) ಪ್ರಕರಣದ ಅಧೀನ ಆಧಾರಗಳ ವಿಚಾರಣೆಗೆ ಸಕ್ಷಮ ಅಧಿಕಾರ ವ್ಯಾಪ್ತಿಯಾದ ನ್ಯಾಯಾಲಯದಲ್ಲಿ ಸದರಿ ಆರೋಪಿತರೆಂದು ಹೇಳಲಾದ ಅಧಿಕಾರಿಗಳ ವಿರುದ್ಧ ಮೊಕದ್ದಮೆ ಹೂಡಲು ಸರ್ಕಾರದ ಮಂಜೂರಾತಿಯನ್ನು ನೀಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಸಂ.(3)ರ ದಿನಾಂಕ: 30-09-2000ರ ಸರ್ಕಾರದ ಆದೇಶದಲ್ಲಿ, ಅಪರ ಆರಕ್ಷಕ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಕಛೇರಿ, ಇವರು ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರ ಅಪರಾಧಗಳ ವಿಷಯದಲ್ಲಿ ಸಕ್ಷಮ ಅಧಿಕಾರವುಳ್ಳ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿರುತ್ತದೆ.

ಮೇಲೆ ಓದಲಾದ ಕ್ರಸಂ.(4)ರ ದಿನಾಂಕ: 22-12-2000ರ ಆದೇಶದಲ್ಲಿ, ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ನೆಲಮಂಗಲ ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10(1)ರನ್ವಯ ಸದರಿಯವರ ವಿರುದ್ಧ, ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಿ, ಆದೇಶಿಸಿರುತ್ತದೆ.

ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರು ಮೇಲೆ ಓದಲಾದ ಕ್ರಸಂ. (5)ರ ದಿನಾಂಕ: 03/05-01-2001 ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಸೇವೆಗೆ ಪುನರ್ ನೇಮಿಸಲು ಆದೇಶ ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಅಧಿಕಾರಿಯ ಮನವಿಯನ್ನು ಪರಿಶೀಲಿಸಿ, ಸರ್ಕಾರವು ಮೇಲೆ ಓದಲಾದ ಕ್ರಸಂ. (6)ರ ದಿನಾಂಕ: 09-03-2001ರ ಆದೇಶದಲ್ಲಿ, ಸದರಿ ಅಧಿಕಾರಿ ವಿರುದ್ಧ ಇಲಾಖಾ ವಿಚಾರಣೆ ಕಾಯ್ದರಿಸಿ, ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಸದರಿಯವರನ್ನು ಸೇವೆಗೆ ಪುನರ್ ನೇಮಿಸಿ, ಸದರಿಯವರ ಸೇವೆಯನ್ನು ಬೆಂಗಳೂರು ಸಮೂಹ ಕ್ಷಿಪ್ರ ಸಾರಿಗೆ ನಿಗಮದಲ್ಲಿ (ಬಿ.ಎಂ.ಆರ್.ಟಿ.ಎಲ್) ವಿಶೇಷ ತಹಶೀಲ್ದಾರ್ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಗೆ ನೀಡಲಾಗಿತ್ತು.

ಗೌರವಾನ್ವಿತ ಸೆಷನ್ಸ್ ಜಡ್ಜ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಅವರ ಮೇಲೆ ಓದಲಾದ ಕ್ರಸಂ. (7)ರ ಆದೇಶದ ದಿನಾಂಕ: 06-01-2009 ರಲ್ಲಿ ಕೇಸ್ ಸಂ: ಸ್ಪೆಷಲ್ ಸಿ.ಸಿ. ನಂ: 36/2004 ರ ಕುರಿತಂತೆ, ನ್ಯಾಯಾಲಯದಲ್ಲಿ ವಿಚಾರಣೆಯು ಶ್ರೀಮತಿ ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರ ವಿರುದ್ಧದ ಆಪಾದನೆಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿರುತ್ತದೆ.

ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಮೇಲೆ ಓದಲಾದ ಕ್ರಸಂ.(8)ರ ದಿನಾಂಕ: 22-04-2010ರ ಪತ್ರದಲ್ಲಿ ಶ್ರೀಮತಿ ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದಲ್ಲಿನ ನ್ಯಾಯಾಲಯವು ನೀಡಿರುವ ತೀರ್ಪಿನ ವಿರುದ್ಧ ಸರ್ಕಾರವು ಮೇಲ್ಮನವಿ ಸಲ್ಲಿಸದಿರಲು ತೀರ್ಮಾನಿಸಿದೆ ಎಂದು ತಿಳಿಸಿರುತ್ತಾರೆ.

ನ್ಯಾಯಾಲಯವು ನೀಡಿರುವ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಶ್ರೀಮತಿ ಭಾಗ್ಯವತಮ್ಮ ಇವರ ವಿರುದ್ಧ ಆರೋಪಗಳಿಂದ ಮುಕ್ತಗೊಳಿಸಿರುವುದನ್ನು ಒಪ್ಪಿ, ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 04 ಎಡಿಇ 2000 ಬೆಂಗಳೂರು, ದಿನಾಂಕ: 02-07-2010

ಪ್ರಸಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪ್ರಸ್ತುತ ತಹಶೀಲ್ದಾರ್, ಬಿ.ಎಂ.ಟಿ.ಎಫ್, ಬೆಂಗಳೂರು ಇವರ ವಿರುದ್ಧ ದಾಖಲಾದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ಹಾಗೂ ಈ ಹಿಂದೆ ಅಮಾನತ್ತಿನಲ್ಲಿಟ್ಟ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಪಿ.ಆರ್. 1828

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3)

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂಖ್ಯೆ : 48ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ಹಣ ಬಿಡುಗಡೆ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಪತ್ರ ಸಂ. ಮೂಅಇ 103 ರಾರಾಹೆ 06, ದಿನಾಂಕ : 4-7-2008.
2) ಸರ್ಕಾರದ ಆದೇಶ ಸಂಖ್ಯೆ : ಮೂಅಇ 17 ರಾರಾಹೆ 10, ದಿನಾಂಕ : 12-3-2010.
3) ಮುಖ್ಯ ಇಂಜನಿಯರ, ಸಂಪರ್ಕ ಮತ್ತು ಕಟ್ಟಡ (ದ), ಲೋಕೋಪಯೋಗಿ ಇಲಾಖೆ, ಬೆಂಗಳೂರು ರವರ ದಿನಾಂಕ : 29-6-2010ರ ಪತ್ರ ಸಂಖ್ಯೆ : ಸಿ.ಬಿ.ಎಸ್.ಹಭಪ:34:ಹಭಪ 5465: 2010-11.

ಪ್ರಸ್ತಾವನೆ :-

ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂಖ್ಯೆ: 48ರ ಬದಲಿಗೆ ರಸ್ತೆ ಮೇಲು ಸೇತುವೆ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ತಗಲುವ ಒಟ್ಟಾರೆ ವೆಚ್ಚ ರೂ. 18.19 ಕೋಟಿಗಳ ಪರಿಷ್ಕೃತ ಅಂದಾಜಿಗೆ ತಗಲುವ ಒಟ್ಟಾರೆ ಮೊತ್ತದ ಶೇ. 50 ರಷ್ಟನ್ನು ರೈಲ್ವೆ ಇಲಾಖೆಯಿಂದ ಪಡೆಯುವ ಷರತ್ತಿಗೊಳಪಟ್ಟು ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಮೇಲೆ ಓದಲಾದ (1)ರ ಸರ್ಕಾರಿ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

2. ಎಲ್.ಸಿ. ಸಂಖ್ಯೆ 48ರಲ್ಲಿ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿನ್ನು ಪ್ರಾರಂಭಿಸಲು ಸ್ಥಳದಲ್ಲಿರುವ ವಿದ್ಯುತ್ ಕಂಭಗಳ ಸ್ಥಳಾಂತರ ಮತ್ತು ಅರಣ್ಯ ಇಲಾಖೆಗೆ ಸಂಬಂಧಿಸಿದ ಮರಗಳನ್ನು ಕಡಿತಕ್ಕೆ ಹಾಗೂ ಯುಟಿಲಿಟಿ ಸ್ಥಳಾಂತರಕ್ಕೆ ರೂ. 2.00 ಕೋಟಿಯನ್ನು ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಲಾಗಿತ್ತು.

3. ವಿದ್ಯುತ್ ಕಂಬಗಳ ಸ್ಥಳಾಂತರದ ಹಾಗೂ ಇತರೆ ಬಿಲ್ಲಿನ ಮೊತ್ತವನ್ನು ನಿಗದಿತ ಅವಧಿಯಲ್ಲಿ ಸಲ್ಲಿಸದೇ ಇರುವುದರಿಂದ ಮೇಲ್ಕಂಡ ಕಾಮಗಾರಿಗೆ ಬಿಡುಗಡೆ ಮಾಡಲಾದ ಮೊತ್ತವನ್ನು ದಿನಾಂಕ 31-3-2010 ರೊಳಗಾಗಿ ರೂ. 53,76,921/-ಗಳನ್ನು ಮಾತ್ರ ವೆಚ್ಚವಾಗಿದ್ದು, ಉಳಿದ ಮೊತ್ತವನ್ನು ಭರಿಸಲು ಸಾಧ್ಯವಾಗದೇ ಇರುವುದರಿಂದ ಲ್ಯಾಪ್ಸ ಆಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು ನೀಡಿರುವ ವರದಿಯು ಸಮಂಜಸವಾಗಿದೆ ಎಂದು ತಿಳಿಸುತ್ತಾ, ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ರೂ. 2.00 ಕೋಟಿ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (3)ರ ಪತ್ರದಲ್ಲಿ ಮುಖ್ಯ ಇಂಜನಿಯರವರು (ದ) ಕೋರಿರುತ್ತಾರೆ.

4. ಈ ಅಂಶಗಳೆಲ್ಲವನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 17 ರಾರಾಹೆ 2010, ಬೆಂಗಳೂರು, ದಿನಾಂಕ : 14-7-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂಖ್ಯೆ: 48ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ರೂ. 2.00 ಕೋಟಿಯನ್ನು (ಎರಡು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಿದೆ. ಸದರಿ ಮೊತ್ತವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465-01-190-3-04-(ಯೋಜನೆ)-211 ಬಂಡವಾಳ" ಇದರ ಅಡಿಯಲ್ಲಿ ರಸ್ತೆ ಮೇಲು ಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಣೆ ಮಾಡಿರುವ ರೂ. 30.00 ಕೋಟಿಗಳಿಂದ ಭರಿಸುವುದು. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಶಿವಮೊಗ್ಗ ಇವರು ಸವಿವರ ಸಾದಿಲ್ವಾರು ಬಿಲ್ಲಿನ ಮೂಲಕ ಸೆಳೆದು ಸಂಬಂಧಪಟ್ಟವರಿಗೆ ಖಜಾನೆ ಚೆಕ್ ಮೂಲಕ ಪಾವತಿಸತಕ್ಕದ್ದು.

2. ಈ ಆದೇಶವನ್ನು ದಿನಾಂಕ : 16-5-2008 ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008 ಸರ್ಕಾರಿ ಆದೇಶದಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಎಸ್.ವೇಣುಗೋಪಾಲ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 1829

ವಸತಿ ಸಚಿವಾಲಯ

ವಿಷಯ : ಹೆಬ್ಬಾಳ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾದ : ಸರ್ಕಾರದ ಆದೇಶ ಸಂಖ್ಯೆ : ವಇ 42 ಹೆಚ್‌ಎಎಂ 1999, ದಿನಾಂಕ 10-5-2000.

ಪ್ರಸ್ತಾವನೆ :-

ಸರ್ಕಾರವು ರಾಜ್ಯ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ/ಪಟ್ಟಣ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ರಚಿಸಲು ಆದೇಶಿಸಿದೆ. ಕೆಲವು ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರೇತರ ಸದಸ್ಯರ ನಾಮನಿರ್ದೇಶನವಾಗಬೇಕಾಗಿದ್ದು, ಇಂಥ ಸ್ಥಳೀಯ ಸಂಸ್ಥೆಗಳಲ್ಲಿ ನಗರ/ಪಟ್ಟಣ ಆಶ್ರಯ ಸಮಿತಿ ಕಾರ್ಯನಿರ್ವಹಿಸುತ್ತಿಲ್ಲ. ನಗರ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ತಕ್ಷಣವೇ ಪ್ರಾರಂಭವಾಗಬೇಕಾಗಿರುವುದರಿಂದ, ಅಧಿಕಾರೇತರ ಸದಸ್ಯರ ನಾಮನಿರ್ದೇಶನ ಬಾಕಿ ಇಟ್ಟು, ಈ ಕೆಳಗಿನಂತೆ ನಗರ/ಪಟ್ಟಣ ಆಶ್ರಯ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 212 ಹೆಚ್‌ಎಎಸ್ 2010, ಬೆಂಗಳೂರು, ದಿನಾಂಕ : 4ನೇ ಜೂನ್2010

ಹೆಬ್ಬಾಳ ನಗರ ಆಶ್ರಯ ಸಮಿತಿಯನ್ನು ಈ ಕೆಳಕಂಡಂತೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್‌ರಚಿಸಲಾಗಿದೆ.

1.	ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು	ಅಧ್ಯಕ್ಷರು
2.	ಆ ಪ್ರದೇಶದ ವಿಧಾನ ಪರಿಷತ್ತಿನ ಸದಸ್ಯರು	ಸದಸ್ಯರು
3.	ಸ್ಥಳೀಯ ಸಂಸ್ಥೆಯ ಮಹಾಪೌರರು/ಅಧ್ಯಕ್ಷರು ಅಥವಾ ಅವರ ಪ್ರತಿನಿಧಿ	ಸದಸ್ಯರು

4. ಸಂಬಂಧಪಟ್ಟ ಕಂದಾಯ ವಿಭಾಗದ ಉಪ ವಿಭಾಗಾಧಿಕಾರಿ — ಸದಸ್ಯರು
5. ತಾಲ್ಲೂಕಿನ ತಹಶೀಲ್ದಾರರು — ಸದಸ್ಯರು
6. ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ — ಸದಸ್ಯರು
7. ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ ಅಥವಾ ಆಯುಕ್ತರು — ಸದಸ್ಯ ಕಾರ್ಯದರ್ಶಿ

ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ನೀಡಿದ ಮಾರ್ಗದರ್ಶಿಕೆಗಳನ್ನು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ವಿ. ಕೊಂಗವಾಡ
ಸರ್ಕಾರದ ಕಾರ್ಯದರ್ಶಿ
ವಸತಿ ಇಲಾಖೆ

ಪಿ.ಆರ್. 1830

FOREST, ECOLOGY AND ENVIRONMENT SECRETARIAT

Sub : Diversion of 10.20 ha. Of forest land in Kudrekanive SF, Hosadurga Range of Chitradurga Division for mining manganese ore in favour of M/s Jayalakshmi Minerals.

Read :
1. Letter No. A5 (B1) MNG.CR 59/92-93, dated 4-4-1995 of Principal Chief Conservator of Forests, Bangalore.
2. State Government Letter No. FEE 27 FFM 95, dated : 20-7-1995.
3. Letter No. F(C)A/16.1/KAR/37/MIN/1982, dated : 25-1-2007 of Government of India, Ministry of Environment and Forests, Regional Officer, Southern Zone, Bangalore.
4. Letter No. A5(1) MNG.CR. 59/93-94, Dated 29-8-2008 and 25-5-2009 of Principal Chief Conservator of Forests, Bangalore.
5. State Government letter No. FEE 39 FFM 2007, dated : 7-9-2009.
6. Letter No. F(C)A/16.1/KAR/37/MIN/7335, dated : 17-6-2010 of Government of India, Ministry of Environment and Forests, Regional Office, Southern Zone, Bangalore.

Preamble :

The Principal Chief Conservator of Forests, Bangalore vide his letter dated : 4-4-1995 read at (1) above has submitted the proposal to obtain the approval of Government of India under Section 2 of the Forest (Conservation) Act, 1980 for diversion 10.20 ha. of forest land in Kudrekanive SF, Hosadurga Range of Chitradurga Division for mining manganese ore in favour of M/s Jayalakshmi Minerals, for a period of 10 years, subject to the certain conditions.

The proposal of Principal Chief Conservator of Forests was recommended to Government of India, Ministry of Environment and Forests, Regional Office, Bangalore vide State Government letter dated 20-7-1995 read at (2) above seeking prior approval of Government of India under section 2 of Forests (Conservation) Act, 1980.

The Government of India, Ministry of Environment and Forests, Regional office, Bangalore vide their letter dated 25-1-2007 read at (3) above has given its approval in Principle (Stage-I) for diversion of 10.20 ha. of forest land subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letters dated : 29-8-2008 and 25-5-2009 furnished the compliance report read at (4) above and the same has been sent to Government of India vide State Government letter dated : 7-9-2009 read at (5) above.

Finally Government of India Ministry of Environment and Forests, Regional Office, South Zone, Bangalore vide its letter dated 17-6-2010 read at (6) above has conveyed its final approval (Stage-II) under Section 2 of the Forest (Conservation) Act, 1980 for diversion of 10.20 ha. of forest land in Kudrekanive SF, Hosadurga Range of Chitradurga Division for mining lease in favour of M/s Jayalakshmi Minerals, for a period of 10 years, subject to the certain conditions.

The proposal has been examined in detail and hence the Order.

GOVERNMENT ORDER NO. : FEE 39 FFM 2007, BANGALORE, DATED : 8-7-2010

In the circumstances explained above, Government are pleased to accord sanction under Section 2 of the Forest (Conservation) Act, 1980 for diversion of 10.20 ha. of forest land in Kudrekanive SF, Hosadurga Range of Chitradurga Division for mining manganese ore in favour of M/s Jayalakshmi Minerals, for a period of 10 years, subject to the following conditions :-

1. The legal Status of the forest land shall remain unchanged.
2. The demarcation of mining lease will be done on the ground using four feet high reinforced concrete pillars with serial numbers, forward and back bearings and distance from pillar to pillar recorded on the pillars at the cost of user agency. GPS readings for the mine area shall be taken and recorded by the Forest Department.
3. The compensatory afforestation shall be raised over 10.20 ha. identified non-forest land in Sy. No. 88 of Sheeranakatte village of Hosadurga taluk, Chitradurga District at the cost of user agency. The State Government shall obtain prior permission of Central Government for change of location and schedule of compensatory afforestation, if any.

4. Non forest land for compensatory afforestation shall be notified by the State Government as P.F./R.F. and Nodal Officer (FCA) shall report the compliance within 6 months.
5. The additional amount of the Net Present Value (NPV) of the diverted forest land if any, due as per the orders of the Hon'ble Supreme Court dated : 28-3-2008 and 9-5-2008 in IA Nos. 826 in 566 with related IA's in W.P. (Civil) No. 202/1995 shall be realized from the user agency and transferred to Ad-hoc CAMPA in account number CA-1582 of Corporation Bank, Block-II, CGO Complex, Phase-I, Lodhi Road, New Delhi-110003 under intimation to the Government of India.
6. The State Government shall maintain area upto 7.5 mts. As safety zone all along the boundary and will also raise and maintain the plantation over an area, one and half times of the extent of the safety zone in degraded forest land elsewhere at the project cost.
7. The mining activity in the forest area shall be carried out as per the approved mining plan
8. No new construction of buildings for any purpose will be taken up in the forest area diverted for the project.
9. The user agency shall obtain environmental clearance under the Environment (Protection) Act, 1986.
10. The Consent of State Pollution Control Board (SPCB) shall be obtained under Air and Water Act before commencement of mining operation and it shall be renewed every year.
11. No. labour camps shall be established on the leased/diverted forest land.
12. Sufficient firewood shall be provided by the user agency to the laboureres at the project cost after purchase from the State Forest Department/Forest Development Corporation.
13. Reclamation plan shall be executed by the user agency from the very first year of mining and an annual report shall be sent to the Nodal Officer and the Regional Office, Bangalore.
14. The user agency shall protect the top soil at the project cost.
15. The user agency shall ensure that there should be no damage to the wildlife.
16. A comprehensive monitoring shall be done at the end of five years to study the impact of mining on the surrounding flora and faun a and its watershed. If it is found that the lessee has violated or is not complying with the stipulated conditions, then the approval given under the Forest (Conservation) Act, 1980 shall be revoked.
17. The total forest area utilized for the project shall not exceed 10.20 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
18. Compensatory Afforestation shall be raised for at the cost of user agency over equivalent non forest land at the rate of prevailing rate. (at present Rs. 94,000/- per ha. vide G.O. No. FEE 242 FAP 09, dated : 8-1-2010).
19. The leassee shall pay usual lease rent and supervision charges.
20. The company shall protect and nurture the natural growth in the area, and shall undertake to protect rigidly.
21. The Company shall not cut the trees without prior permission of the Forest Department and all material derived from permitted fellings shall be handed over to Forest Department under cover or receipt.
22. Transportation of ore shall be strictly as per transit rules of Karnataka Forest Rules.
23. The Company shall pay royalty, taxes, as per prevailing rates of the Government from time to time, before obtaining permit from the Forest Department.
24. The Company shall execute the agreement with the Department agreeing to abide by usual terms and conditions including afforestation works necessitated for the safety of the area.
25. The lessee shall take up planting work on the static dumps during the advance mining operations.
26. The lessee shall undertake the afforestation works in other blank areas of the leased area.
27. The Lessee shall carry out soil and water conservation measures as suggested by the Forest Department.
28. The lessee shall deposit the necessary amount for the construction of retaining wall joining hillocks as a part of soil conservation measures.
29. In case of violation of any of the agreement conditions, Forest Department shall have the right to suspend the work.
30. Any other conditions to be imposed by the Government of India/Government of Karnataka and Principal Chief Conservator of Forest will have to be abided by the lessee.

By Order and in the name of the Governor of Karnataka

H.M. Mallikaruna Swamy
Under Secretary to Government,
Forest, Ecology and Environment Department

P.R. 1831

ವಸತಿ ಸಚಿವಾಲಯ

ವಿಷಯ : 2010-11 ನೇ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ : ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ : ಕಕೊನಿಮ/ಲೆಪಶಾ/ಅನುದಾನ : 2010-11, ದಿನಾಂಕ : 24-5-2010.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿರವರ ಪತ್ರದಲ್ಲಿ, 2010-11ನೇ ಸಾಲಿನ ಆಯವ್ಯಯದ ಸವಿವರ ವೆಚ್ಚದ ಅಂದಾಜುಗಳ ಪುಸ್ತಕ ಸಂಪುಟ-5ರಲ್ಲಿ ರೂ. 6400.00 ಲಕ್ಷಗಳನ್ನು ಯೋಜನೆಯಡಿಯಲ್ಲಿ ಹಾಗೂ ರೂ. 3087.31 ಲಕ್ಷಗಳನ್ನು ಯೋಜನೇತರಡಿಯಲ್ಲಿ ಒಟ್ಟು ರೂ. 9481.31 ಲಕ್ಷಗಳನ್ನು ಒದಗಿಸಲಾಗಿರುವುದರಿಂದ 2010-2011ನೇ ಸಾಲಿನ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಸಿಬ್ಬಂದಿ ವೆಚ್ಚಕ್ಕೆ (ಯೋಜನೆ ಮತ್ತು ಯೋಜನೇತರಡಿ) ರೂ. 159.33 ಲಕ್ಷಗಳು ಹಾಗೂ ಹುಡ್ಕೊ ಸಾಲಗಳ ಮೇಲು ಉಸ್ತುವಾರಿಗಾಗಿ ರೂ. 466.72 ಲಕ್ಷಗಳು (ಹುಡ್ಕೋ ಸಂಸ್ಥೆಯ ಬೇಡಿಕೆಯನ್ವಯ) ಒಟ್ಟು ಯೋಜನೆಯಡಿ ರೂ. 100.00 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ. 538.55 ಲಕ್ಷಗಳು ಒಟ್ಟು ರೂ. 638.55 ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 21 ಕೊಮಂಲೆ 2010, ಬೆಂಗಳೂರು, ದಿನಾಂಕ : 1-7-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ 2010-11ನೇ ಸಾಲಿಗೆ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ ಯೋಜನೆ ಮತ್ತು ಯೋಜನೇತರ ಹಾಗೂ ಹುಡ್ಕೊ ಸಾಲದ ಮೇಲು ಉಸ್ತುವಾರಿ (ಯೋಜನೇತರ)ಗಾಗಿ ಒಟ್ಟು ರು. 638.55 ಲಕ್ಷಗಳು (ಆರು ಕೋಟಿ ಮೂವತ್ತೆಂಟು ಲಕ್ಷಕ ಐವತ್ತೈದು ಸಾವಿರ ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಮೊದಲನೇ ತ್ರೈಮಾಸಿಕ		
		ಯೋಜನೆ	ಯೋಜನೇತರ	ಒಟ್ಟು
1	ಸಿಬ್ಬಂದಿ ವೆಚ್ಚ 2217-04-191-2-01	87.50	71.83	159.33
2	ಕೊಳಚೆಗಳ ಸುಧಾರಣೆ ಸಹಾಯಧನ 2217-04-191-2-02	12.50	0.00	12.50
3	ಹುಡ್ಕೋ ಸಾಲಗಳ ಮೇಲು ಉಸ್ತವಾರಿ 4217-60-800-3-01	–	466.72	466.72
	ಒಟ್ಟು			**638.55**

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆಗೊಳಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತಾರೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಕಂತಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ : ಎಫ್‌ಡಿ 435 ವೆಚ್ಚ-9/2010, ದಿನಾಂಕ : 29-6-2010ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಆರ್. ನಾಗರಾಜ

ಪೀಠಾಧಿಕಾರಿ-4, ವಸತಿ ಇಲಾಖೆ

ಪಿ.ಆರ್. 1832

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಟಿ.ಎಸ್. ರಮೇಶ್‌ರವರನ್ನು ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರರವರ ಆಪ್ತ ಶಾಖೆಯಲ್ಲಿ ಗ್ರೂಫ್-ಡಿ ಹುದ್ದೆಗೆ ನೇಮಿಸುವ ಬಗ್ಗೆ.

ಓದಲಾಗಿದೆ : ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರ ಟಿಪ್ಪಣಿ ಸಂಖ್ಯೆ : ಕಗಪ್ರಅಪ್ರಾ/88/2010, ದಿನಾಂಕ : 25-1-2010.

ಪ್ರಸ್ತಾವನೆ :

ಮೇಲೆ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರು ಶ್ರೀ ಟಿ.ಎಸ್. ರಮೇಶ್ ಬಿನ್ ಕೆ.ಎಸ್. ಸಿದ್ದಬಸಪ್ಪ, ತುಂಬಿಗೆರೆ, ದಾವಣಗೆರೆ, ದಾವಣಗೆರೆ ತಾಲ್ಲೂಕು, ಇವರನ್ನು ದಿನಾಂಕ : 25-1-2010 ರಿಂದ ಜಾರಿಗೆ ಬರುವಂತೆ ಗುತ್ತಿಗೆ ಆಧಾರದ ಮೇಲೆ ಗ್ರೂಪ್-ಡಿ ಹುದ್ದೆಗೆ ನೇಮಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಶಾಖೆಯ ಖಾಲಿ ಇರುವ ಗ್ರೂಪ್-ಡಿ ಹುದ್ದೆಗೆ ಶ್ರೀ ಟಿ.ಎಸ್. ರಮೇಶ್‌ರವರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ : ಕಸಂವಾಪ್ರ 31 ಕೆಓಎಲ್ 2010, ಬೆಂಗಳೂರು, ದಿನಾಂಕ : 8-7-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಟಿ.ಎಸ್. ರಮೇಶ್‌ರವರನ್ನು ಅನುಬಂಧದಲ್ಲಿ ಲಗತ್ತಿಸಿರುವ ಷರತ್ತು ಮತ್ತು ನಿಬಂಧನೆಗಳನ್ವಯ ದಿನಾಂಕ : 21-5-2010 ರಿಂದ ಜಾರಿಗೆ ಬರುವಂತೆ ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಇವರ ಆಪ್ತ ಶಾಖೆಯಲ್ಲಿನ ಗ್ರೂಪ್-ಡಿ ಹುದ್ದೆಗೆ ಪ್ರಾಧಿಕಾರದ ಅಧ್ಯಕ್ಷರ ಅವಧಿಯವರೆಗೆ ಅಥವಾ ಮುಂದಿನ ಆದೇಶದವರೆಗೆ, ಅದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಗ್ರೂಪ್-ಡಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 316 ವೆಚ್ಚ-7/2010, ದಿನಾಂಕ 24-6-2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು
ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ಸರ್ಕಾರಿ ಆದೇಶ ಸಂಖ್ಯೆ : ಕಸಂವಾಪ್ರ 31 ಕೆಓಎಲ್ 2010, ದಿನಾಂಕ

ಗುತ್ತಿಗೆ ನೇಮಕಾತಿಯ ಬಗ್ಗೆ ಷರತ್ತು ಮತ್ತು ನಿಬಂಧನೆಗಳು

1. ಶ್ರೀ ಟಿ.ಎಸ್. ರಮೇಶ್, ಗ್ರೂಪ್-ಡಿ, ರವರ ಗುತ್ತಿಗೆ ನೇಮಕಾತಿಯ ಅವಧಿಯು ದಿನಾಂಕ : 21-5-2010 ರಿಂದ ಜಾರಿಗೆ ಬರುವಂತೆ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಈಗಿನ ಅಧ್ಯಕ್ಷರ ಪದಾವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಇವರ ಗುತ್ತಿಗೆ ನೇಮಕಾತಿಗೆ ಮಾಸಿಕ ರೂ.4,800/- (ನಾಲ್ಕು ಸಾವಿರದ ಎಂಟು ನೂರು ರೂಪಾಯಿಗಳು ಮಾತ್ರ) ಗಳ ಸಂಚಿತ ವೇತನವನ್ನು ನಿಗದಿಪಡಿಸಲಾಗಿದೆ. ಇದಲ್ಲದೆ, ಇನ್ನಿತರ ಯಾವುದೇ ಭತ್ಯೆಗಳಿಗೂ ಇವರು ಅರ್ಹರಾಗಿರುವುದಿಲ್ಲ.
3. ಸದರಿ ಗುತ್ತಿಗೆ ನೌಕರನು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸದರಿ ಗುತ್ತಿಗೆ ನೌಕರರ ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆಯನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.
5. ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ವೈದ್ಯಕೀಯ ಕಾರಣಗಳ ಮೇರೆಗಾಗಲೀ ಅಥವಾ ಬೇರೆ ಕಾರಣಗಳಿಂದಾಗಲೀ ಅನಧಿಕೃತ ಗೈರು ಹಾಜರಿಯಾದಲ್ಲಿ ಗುತ್ತಿಗೆ ಆಧಾರದ ನೇಮಕಾತಿಯು ತಾನಾಗಿಯೇ ರದ್ದಾಗುತ್ತದೆ.
6. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು, ವೈದ್ಯಕೀಯ ಕಾರಣಗಳ ಮೇರೆಗೆ ಅಥವಾ ಸಮರ್ಥನೀಯ ಕಾರಣಗಳ ಮೇರೆಗೆ ಗುತ್ತಿಗೆ ಆಧಾರದ ಅವಧಿಯಲ್ಲಿ ಮೂರು ತಿಂಗಳಿಗೆ ಮೀರದಂತೆ, ಗೈರುಹಾಜರಾದಲ್ಲಿ ಆ ಕಾರಣದಿಂದ ಗುತ್ತಿಗೆ ನೇಮಕಾತಿ ರದ್ದಾಗುವುದಿಲ್ಲ. ಆದರೆ ಈ ಅವಧಿಯನ್ನು ಕರ್ತವ್ಯ ರಹಿತ ದಿನಗಳೆಂದು (ಡೈಸ್-ನಾನ್) ಪರಿಗಣಿಸಲಾಗುವುದು ಮತ್ತು ಅವರು ಈ ಅವಧಿಗೆ ಯಾವುದೇ ವೇತನ ಮತ್ತು ಇತರೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
7. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಿಗೆ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ, ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
8. ಸದರಿ ನೌಕರರ ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.
9. ಸದರಿ ಗುತ್ತಿಗೆ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸುವುದಿಲ್ಲ.
10. ಅವರ ಕರ್ತವ್ಯ ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಗಳಿಂದ ನೆರವೇರಿಸುವುದು.
11. ಅವರ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.
12. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.
13. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

14. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಮತ್ತು ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಅವರು ಸರ್ಕಾರಕ್ಕೆ ತುಂಬಿಕೊಡಲು ಹೊಣೆಯಾಗಿರುತ್ತಾರೆ.
15. ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು
ಪ್ರವಾಸೋದ್ಯಮ ಇಲಾಖೆ (ಆಡಳಿತ)

ಪಿ.ಆರ್. 1833

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ದಿನಾಂಕ : 12-3-2010, ಹಾಗೂ ತಿದ್ದುಪಡಿ ದಿನಾಂಕ : 23-3-2010.

2. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/3795/2010 ಹಾಗೂ ಮುಮಕಾ/3796/2010, ದಿನಾಂಕ 30-6-2010.

ಪ್ರಸ್ತಾವನೆ :

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಕರ್ನಾಟಕ ಗೃಹ ಮಂಡಳಿ ಮುಖಾಂತರ ಮನೆಗಳ ನಿರ್ಮಾಣವನ್ನು ಕೈಗೊಳ್ಳಲಾಗಿದ್ದು, ಇನ್ನೂ ಹೆಚ್ಚುವರಿ ಮನೆಗಳನ್ನು ನಿರ್ಮಿಸಲು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ಬೆಂಗಳೂರು, ದಿನಾಂಕ : 8ನೇ ಜುಲೈ 2010

ನೆರೆಹಾವಳಿ ಸಂತ್ರಸ್ಥರಿಗೆ ಮನೆಗಳ ನಿರ್ಮಾಣ ಕಾರ್ಯವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಕರ್ನಾಟಕ ಗೃಹ ಮಂಡಳಿಗೆ ವಹಿಸಿಕೊಡಲಾಗಿದ್ದು, ಈ ಕೆಳಗಿನಂತೆ 2,542 ಹೆಚ್ಚುವರಿ ಮನೆಗಳನ್ನು ವಹಿಸಿಕೊಡಲಾಗಿದ್ದು, ಅದೇ ಷರತ್ತು ಮತ್ತು ನಿಬಂಧನೆಗಳ ಮೇರೆಗೆ ಮನೆಗಳ ನಿರ್ಮಾಣ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಆದೇಶಿಸಲಾಗಿದೆ.

1) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ವಹಿಸಿಕೊಡಲಾದ ಮನೆಗಳು :

ಜಿಲ್ಲೆ	ತಾಲ್ಲೂಕು	ಗ್ರಾಮಗಳು	ಮನೆಗಳ ಸಂಖ್ಯೆ
ಬಾಗಲಕೋಟೆ	ಬಾದಾಮಿ	ಚಿಮ್ಮಲಗಿ	428
		ಢಾಣಕಶಿರೂರ	324
		ಕಿತ್ತಲಿ	230
		ತಳಕವಾಡ	134
		ಆಲೂರು ಎಸ್.ಕೆ	177
	ಜಮಖಂಡಿ	ಜಮಖಂಡಿ	102
	ಹುನಗುಂದ	ಹಿರೆಮಳಗಾವಿ	490
		ಒಟ್ಟು	1885

2) ಕರ್ನಾಟಕ ಗೃಹ ಮಂಡಳಿಗೆ ವಹಿಸಿಕೊಡಲಾದ ಮನೆಗಳು :

ಜಿಲ್ಲೆ	ತಾಲ್ಲೂಕು	ಗ್ರಾಮಗಳು	ಮನೆಗಳ ಸಂಖ್ಯೆ
ಬಾಗಲಕೋಟೆ	ಬಾದಾಮಿ	ಕಾಟಾಪುರ	132
		ಜಕನೂರ	113
		ಕಾತರಕಿ	153
		ಗೋವಿನಕೊಪ್ಪ	113
		ತಮಿನಾಳ	146
		ಒಟ್ಟು	657

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಆರ್. ವಲ್ಲೂರ
ಪೀಠಾಧಿಕಾರಿ-2, ವಸತಿ ಇಲಾಖೆ

ಪಿ.ಆರ್. 1834

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ದಿನಾಂಕ : 26–5–2010

2. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/3576/2010 ದಿನಾಂಕ 21–6–2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ವಹಿಸಿಕೊಟ್ಟ ಧಾರವಾಡ ಜಿಲ್ಲೆಯ ಅಹೆಟ್ಟಿ ಗ್ರಾಮದಲ್ಲಿ 55 ಮನೆಗಳು ಹಾಗೂ ಬಿಜಾಪುರ ಜಿಲ್ಲೆಯ ತೆಗ್ಗಳಿ ಗ್ರಾಮದಲ್ಲಿ 186 ಮನೆಗಳ ಬದಲಾಗಿ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಅಹೆಟ್ಟಿ ಗ್ರಾಮದಲ್ಲಿ ಒಟ್ಟು 269 ಮನೆಗಳನ್ನು ನಿರ್ಮಿಸುವಂತೆ ಆದೇಶಿಸಲಾಗಿತ್ತು. ಈಗ ಧಾರವಾಡ ಜಿಲ್ಲಾಧಿಕಾರಿಗಳು ಅಹೆಟ್ಟಿ ಗ್ರಾಮದಲ್ಲಿ 55 ಮನೆಗಳನ್ನು ನಿರ್ಮಿಸಲು ಕೋರಿರುವ ಮೇರೆಗೆ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010 (ಭಾ), ಬೆಂಗಳೂರು, ದಿನಾಂಕ : 8ನೇ ಜುಲೈ 2010

ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಧಾರವಾಡ ಜಿಲ್ಲೆಯ ಅಹೆಟ್ಟಿ ಗ್ರಾಮದಲ್ಲಿ ಕೈ ಬಿಡಲಾದ 55 ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಆರ್. ವಲ್ಲೂರ
ಪೀಠಾಧಿಕಾರಿ–2, ವಸತಿ ಇಲಾಖೆ

ಪಿ.ಆರ್. 1835

LAW, JUSTICE AND HUMAN RIGHTS SECRETARIAT

Sub:- Revision of Pension, Family Pension and Allowances to the retired Judicial Officers of the State Implementation of the recommendations of One Man Commission headed by Hon'ble Mr. Justice E. Padmanabhan (Retd) –Order reg.

Read:-
1) G.O. No.Law 124 LAC 1997 dated 07-05-2003.
2) Report submitted on 17-7-2009 by One Man Commission headed by Hon'ble Mr. Justice E. Padmanabhan (Retd) to the Hon'ble Supreme Court on determination of Salary, Allowances and Pension.
3) The directions issued by the Hon'ble Supreme Court on 26-7-2010 and 02-08-2010 in W.P. © No.1022/1989 (All India Judges Association Vs. Union of India and Others)
4) G.O. No.LAW 147 LAC 2009 dated 24-6-2010.

PREAMBLE:

The Hon'ble Supreme Court of India accepted the report of Justice E. Padmanabhan Commission concerned and directed the States to implement the said Commission Report on the Revised Pensionary Benefits and allowances and to pay the arrears from 1-1-2006. The Hon'ble Supreme Court pre-emptorily gave 1-3-2011 as the cut-off date by which payment shall have to be made, including arrears.

Pensioners are of three categories viz.,

i) Officers who have retired earlier to 1-1-2006 (Past Pensioners)
ii) Officers who have retired on or after 1-1-2006
iii) Family Pensioners

The matter has been examined by the Government and hence the following Orders:-

ORDER NO.LAW 147 LAC 2009, BANGALORE, DATED 30th SEPTEMBER 2010

The Government in pursuance of the orders of the Hon'ble Supreme Court, hereby accord sanction to implement the recommendations of Justice E. Padmanabhan Commission, so far as Pensionary Benefits and allowances stated herein below are concerned, in respect of Retired Judicial Officers and family pensioners of the State:-

PART-I

PAST PENSIONERS

(Officers who have retired earlier to 1-1-2006)

The following benefits are admissible effective from 1-1-2006:-

PENSION

(a) Revised Pension of the Retd. Judicial Officers shall be 50% of the minimum pay of the post held at the time of retirement in the revised pay scale as shown in the Table mentioned in Part-VI.

(b) There shall not be any ceiling limit on the maximum pension payable.

PART-II

Officers who have retired after 1-1-2006

Qualifying years of service:-

(a) Qualifying years of service has been slashed down from 33 years to 20 years to get full pension w.e.f. 2-9-2008.

(b) The qualifying service for pension in respect of officers who have retired between 1-1-2006 and 1-9-2008 will be calculated as per the existing rules.

D. C.R.G.:-

The ceiling limit of DCRG is enhanced from Rs.3.5 lakhs to Rs.10 lakhs w.e.f. 01.01.2006 as recommended by Padmanabhan Commission.

PART-III

FAMILY PENSIONERS

(A) The revision of family pension shall come into effect from 1-1-2006 and will be applicable to the Family Pensioners who are drawing Pension prior to 1-1-2006.

(i) Family Pension shall be revised and refixed at 30 percent of the minimum pay of the pay scale of the post held by the Judicial Officer at the time of his retirement or death in the revised pay scale.

(ii) Domestic Help Allowance of Rs.1,000/- p.m.

(iii) Medical Allowance at Rs.750/- p.m.

(B) The revision of family pension in respect of officers who have retired or died on or after 1-1-2006 shall be as follows:-

i) Family Pension shall be revised and refixed at 30 percent of the last pay drawn.

ii) Domestic Help Allowance of Rs.1,000/- p.m.

iii) Medical Allowance at Rs.750/- p.m.

PART-IV

The past pensioners and family pensioners who have completed 80 years of age and above are entitled to additional quantum of pension on par with Central Government employees and it shall be as follows:-

Age of Family Pensioner/ Past Pensioners	Additional quantum of pension
From 80 years to less than 85 years	20% of revised Basic/ family pension
From 85 years to less than 90 years	30% of revised Basic/family pension
From 90 years to less than 95 years	40% of revised Basic/family pension
From 95 years to less than 100 years	50% of revised Basic/family pension
100 years or more	100% of revised Basic/family pension

PART -V

All Pensioners with effect from 1-1-2006 shall get the following benefits:-

(i) Monthly Medical Allowance

They are entitled to get Rs.1,500/- p.m. along with monthly pension.

(ii) Domestic Help Allowance

They are entitled to get Rs.2,500/- p.m. through the Principal District Judge within whose jurisdiction they have settled, on production of a certificate of having engaged Domestic Servant.

PART-VI

Dearness Allowance:-

(i) All Pensioners/Family Pensioners are entitled to Dearness Allowance at the rates applicable to the serving Judicial Officers.

(ii) The revised pay scale is as per G.O. No.LAW 147 LAC 2009 dated 24-6-2010 as shown in the Table below.

(iii) The arrears of all the above benefits shall be payable before 31st March 2011 as directed by Hon'ble Supreme Court.

(iv) In the event of death of pensioner or family pensioner, the arrears of revised pension/family pension together with dearness allowance shall be paid to legal heirs.

(v) The increase in pension/family pension under these orders shall be paid to the pensioners/family pension holders by the Treasury Officer without any authorisation from the Accountant General.

TABLE

Sl.No.	Designation	Existing Scale of Pay	Revised Scale of Pay
1	Civil Judge (Jr.Dn.) (Entry Level)	Rs.9000-250-10750-300-13150-350-14550	Rs.27700-770-33090-920-40450-1080-44770
2.	Civil Judge (Jr.Dn) I Stage A.C.P. Scale	Rs.10750-300-13150-350-14900	Rs.33090-920-40450-1080-45850
3.	Civil Judge (Jr.Dn.) II Stage A.C.P. Scale	Rs.12850-300-13150-350-15950-400-17550	Rs.39530-920-40450-1080-49090-1230-54010
4.	Civil Judge (Sr.Dn.) (Entry Level)	Rs.12850-300-13150-350-15950-400-17550	Rs.39530-920-40450-1080-49090-1230-54010
5.	Civil Judge (Sr.Dn.) I Stage A.C.P. Scale	Rs.14200-350-15950-400-18350	Rs.43690-1080-49090-1230-56470
6.	Civil Judge (Sr.Dn.) II Stage A.C.P. Scale	Rs.16750-400-19150-450-20500	Rs.51550-1230-58930-1380-63070
7.	District Judge (Entry Level)	Rs.16750-400-19150-450-20500	Rs.51550-1230-58930-1380-63070
8.	District Judge (Selection Grade)	Rs.18750-400-19150-450-21850-500-22850	Rs.57700-1230-58930-1380-67210-1540-70290
9.	District Judge (Super Time Scale)	Rs.22850-500-24850	Rs.70290-1540-76450

This order is issued with the concurrence of the Finance Department vide their endorsement No.FD 15 SRP 2009 dated 21-5-2010 and 28-8-2010.

By Order and in the name of the Governor of Karnataka,
(S. SIDDALINGESH)
Secretary to Government,
Department of Law, Justice and Human Rights

PR 2512

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆದ ಪದವಿ ಪೂರ್ವ ಕಾಲೇಜುಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ಹಣಕಾಸು ನೆರವು ಯೋಜನೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಸಂವ್ಯಶಾಇ 15 ಸಂವ್ಯವಿ 2009, ದಿನಾಂಕ 14-7-2009.

ಪ್ರಸ್ತಾವನೆ :

ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಮಾದರಿಯಲ್ಲಿ 2010-11 ನೇ ಶೈಕ್ಷಣಿಕ ವರ್ಷದಿಂದ ಪದವಿ ಪೂರ್ವ ಕಾಲೇಜುಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲು ಸರ್ಕಾರವು ತೀರ್ಮಾನಿಸಿದ್ದುದರಿಂದ ಸದರಿ ಸ್ಪರ್ಧೆಗೆ ಹಣಕಾಸು ಯೋಜನೆಯ ಪ್ರತಿಯನ್ನು ಈ ಆದೇಶಕ್ಕೆ ಲಗತ್ತಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ : ಸಂವ್ಯಶಾಇ 12 ಸಂವ್ಯವಿ 2010, ಬೆಂಗಳೂರು, ದಿನಾಂಕ : 13-07-2010

ಕರ್ನಾಟಕ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆಗಳನ್ನು ಪ್ರತಿ ವರ್ಷ ನಡೆಸುವುದಕ್ಕಾಗಿ ಹಣಕಾಸಿನ ನೆರವು ಯೋಜನೆ 2010 ನ್ನು (ಅನುಬಂಧ-1ರಲ್ಲಿ ಲಗತ್ತಿಸಿ) ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಜಿ. ಶ್ಯಾಮಲ,
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಅನುಬಂಧ-1

ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆದ ಪದವಿ ಪೂರ್ವ ಕಾಲೇಜುಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ಹಣಕಾಸು ನೆರವು ಯೋಜನೆ

ಪೀಠಿಕೆ

ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸುವ ಪರಿಕಲ್ಪನೆ 1962 ರಲ್ಲಿ ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ರೂಪ ತಳೆಯಿತು. ಸದರಿ ಸಮ್ಮೇಳನದಲ್ಲಿ ಇತರೆ ವಿಷಯಗಳ ಜೊತೆಗೆ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಲಾಯಿತು.

"ಈ ಸಮಿತಿಯು, ಅಣಕು ಸಂಸತ್ ಕಾರ್ಯಕ್ರಮಗಳನ್ನು ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಪಂಚಾಯಿತಿಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲು ಸರ್ಕಾರವು ಪ್ರೋತ್ಸಾಹಿಸತಕ್ಕದ್ದೆಂದು ಶಿಫಾರಸ್ಸು ಮಾಡುತ್ತದೆ."

ಮೇಲ್ಕಂಡ ಶಿಫಾರಸ್ಸುಗಳನ್ನು 1966 ರಲ್ಲಿ ಬೆಂಗಳೂರಿನಲ್ಲಿ ನಡೆದ ಐದನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಈ ಮುಂದೆ ಹೇಳಿರುವಂತೆ ಪುನರುಚ್ಚರಿಸಿತು:-

"ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಜನಪ್ರತಿನಿಧಿ ಸಂಸ್ಥೆಗಳ ಪಾತ್ರದ ಬಗ್ಗೆ ಅರಿವು ಮೂಡಿಸಲು ಗ್ರಾಮ ಪಂಚಾಯತಿಗಳಲ್ಲಿ ಅಣಕು ಸಂಸತ್ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿರುವುದಿಲ್ಲ ಎಂಬುದನ್ನು ಈ ಸಮ್ಮೇಳನವು ಗಮನಿಸಿದೆ. ಸಮ್ಮೇಳನವು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ತಮ್ಮ ತೀರ್ಮಾನಗಳನ್ನು ಮರುಪರಿಶೀಲಿಸುವಂತೆ ಅವುಗಳ ಮನವೊಲಿಸಬೇಕೆಂದು ಪುನರುಚ್ಚರಿಸುತ್ತದೆ."

ಮೇಲ್ಕಂಡ ಶಿಫಾರಸುಗಳಿಗನುಸಾರ, ಸಂಸದೀಯ ವ್ಯವಹಾರಗಳ ಮಂತ್ರಾಲಯವು ಅಣಕು ಸಂಸತ್ (ಈಗ "ಯುವ ಸಂಸತ್") ಸ್ಪರ್ಧೆಯ ಯೋಜನೆಯ ವಿವರಗಳನ್ನು ತಯಾರಿಸಿತು ಮತ್ತು ಅದನ್ನು ಪ್ರಾಯೋಗಿಕ ರೂಪದಲ್ಲಿ ನಡೆಸುವ ಉದ್ದೇಶದಿಂದ ದೆಹಲಿಯ ಪ್ರೌಢ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿತು. 1967 ರಲ್ಲಿ ಸಿಮ್ಲಾದಲ್ಲಿ ಮತ್ತು 1969 ರಲ್ಲಿ ಮದ್ರಾಸಿನಲ್ಲಿ ಅನುಕ್ರಮವಾಗಿ ನಡೆದ ಆರು ಮತ್ತು ಏಳನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಲಾಯಿತು:-

"ದೆಹಲಿಯ ಶಾಲೆಗಳಲ್ಲಿ "ಯುವ ಸಂಸತ್" ಕಾರ್ಯಕ್ರಮವನ್ನು ಉತ್ತೇಜಿಸುವುದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಮಾಡಿರುವ ಉತ್ತಮ ಕಾರ್ಯವನ್ನು ಪ್ರಶಂಸಿಸುತ್ತಾ, ಉಳಿದ ರಾಜ್ಯಗಳು ಸಹ ತಮ್ಮ ತಮ್ಮ ರಾಜ್ಯಗಳಲ್ಲಿ ಈ ಯೋಜನೆಯನ್ನು ಅಳವಡಿಸಲು ವ್ಯವಸ್ಥೆಯನ್ನು ಮಾಡತಕ್ಕದ್ದೆಂದು ಸಮ್ಮೇಳನವು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. [6ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

"ದೆಹಲಿಯ ಶಾಲೆಗಳಲ್ಲಿ 'ಅಣಕು ಸಂಸತ್' ಯೋಜನೆಯ ಯಶಸ್ವಿ ಅನುಷ್ಠಾನವನ್ನು ಹಾಗೂ ಪ್ರಮುಖ ಸಂಸದರು, ಪತ್ರಿಕಾ ಮಾಧ್ಯಮಗಳು ಮತ್ತು ಶಿಕ್ಷಣ ತಜ್ಞರಿಂದ ಆ ಬಗ್ಗೆ ಬಂದ ವ್ಯಾಪಕ ಮೆಚ್ಚುಗೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಷ್ಟ್ರದಲ್ಲಿ ಸುಭದ್ರ ಸಂಸದೀಯ ಪದ್ಧತಿಯನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮ್ಮೇಳನವು ಈ ಮುಂದಿನ ಶಿಫಾರಸ್ಸುಗಳನ್ನು ಮಾಡುತ್ತದೆ.-

(ಎ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು ಅನುಸರಿಸಿದ ಮಾದರಿಯನ್ನೇ ಅನುಸರಿಸಿ ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮಕೈಗೊಳ್ಳತಕ್ಕದ್ದು.

(ಬಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಅಗತ್ಯವಿದ್ದಲ್ಲಿ ಹಣಕಾಸು ನೆರವನ್ನು ನೀಡುವ ಮೂಲಕ ಯೋಜನೆಯನ್ನು ಜಾರಿಗೆ ತರಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಬಗೆಯ ಪ್ರೋತ್ಸಾಹಗಳನ್ನು ನೀಡತಕ್ಕದ್ದು; ಮತ್ತು

(ಸಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಅಂತರ್ ರಾಜ್ಯ ಸ್ಪರ್ಧೆಗಳನ್ನು ಸಹ ವ್ಯವಸ್ಥೆಗೊಳಿಸತಕ್ಕದ್ದು. (7ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]".

7ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಮಾಡಿದ ಮೇಲ್ಕಂಡ ಶಿಫಾರಸುಗಳ (ಬಿ) ಭಾಗದ ಪಾಲನೆಯಲ್ಲಿ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ – ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ರೂಪಿಸಿದೆ.

ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಯ ಅನ್ವಯ ಮಾನ್ಯತೆ ಪಡೆದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. 2010-11ನೇ ಸಾಲಿನಿಂದ ಈ ಕೆಳಗೆ ನಮೂದಿಸಿರುವ ಮಾರ್ಗಸೂಚಿಗಳನ್ವಯ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲಾಗುವುದು.

1. **ಯೋಜನೆಯ ಉದ್ದೇಶ:-** ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುವ, ಶಿಸ್ತು, ಇತರರ ಅಭಿಪ್ರಾಯಗಳ ಬಗ್ಗೆ ಗೌರವ, ತಾಳ್ಮೆ ಮುಂತಾದ ಆರೋಗ್ಯಕರ ಗುಣ ವಿಶೇಷಗಳನ್ನು ಮೈಗೂಡಿಸುವ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯ ಕಲಾಪದ ಬಗ್ಗೆ ಅರಿವು ಮೂಡಿಸುವುದೇ ಇದರ ಉದ್ದೇಶ.

2. **ಯೋಜನೆಯ ಕಾರ್ಯಾಚರಣೆ** :- ಈ ಯೋಜನೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಸಹಯೋಗದೊಂದಿಗೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಮಾರ್ಗದರ್ಶನದಲ್ಲಿ ಕಾರ್ಯಗತಗೊಳಿಸಲಾಗುವುದು.

3. **ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅರ್ಹತೆ** :- ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿವೆಯೆಂದು ಪರಿಗಣಿಸಬಹುದು. ಭಾಗವಹಿಸುವ ಶಾಲೆಗಳ ಪಟ್ಟಿಯನ್ನು, ಪ್ರತಿವರ್ಷದ ಮಾರ್ಚ್ 31ರೊಳಗೆ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯವು ಅಂತಿಮಗೊಳಿಸುತ್ತವೆ.

4. **ಯುವ ಸಂಸತ್ ಸ್ಪರ್ಧೆಯನ್ನು ನಡೆಸುವ ಅವಧಿ** :- "ಯುವ ಸಂಸತ್ ಸ್ಪರ್ಧೆ" ಯನ್ನು, ಪ್ರತಿವರ್ಷವು ನಡೆಸಲಾಗುವುದು. ಈ ಬಗ್ಗೆ ಸವಿವರ ಕಾರ್ಯಕ್ರಮವನ್ನು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ರೂಪಿಸತಕ್ಕದ್ದು ಮತ್ತು ವಾರ್ಷಿಕ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ತಿಳಿಸತಕ್ಕದ್ದು.

5. **ಯುವ ಸಂಸತ್ತಿನಲ್ಲಿ ಭಾಗವಹಿಸುವವರ ಸಂಖ್ಯೆ** :- ಪ್ರತಿಯೊಂದು ಪದವಿ ಪೂರ್ವ ಕಾಲೇಜಿನಲ್ಲಿ "ಯುವ ಸಂಸತ್ ಸ್ಪರ್ಧೆಯನ್ನು" ನಡೆಸುವುದಕ್ಕಾಗಿ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಯಾವುದೇ ಮಿತಿ ಇಲ್ಲ. ಆದಾಗ್ಯೂ, ಅಧಿವೇಶನದ ಅವಧಿಯನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಾಗಿರುವ ಕಾರಣ, ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಹಲವರು ಸಂಸತ್ತಿನ ಅಧಿವೇಶನದ ಒಂದು ಚಿತ್ರಣವನ್ನು ಮೂಡಿಸುವುದಕ್ಕೆ ಮಾತ್ರವೇ ಸುಮ್ಮನೆ ಕುಳಿತುಕೊಂಡಿರಬೇಕಾಗುತ್ತದೆ ಮಾತ್ರವಲ್ಲದೆ ಅವರಿಗೆ ಮಾತನಾಡುವ ಅಗತ್ಯವಿರುವುದಿಲ್ಲ.

6. **ಯುವ ಸಂಸತ್ತಿನ ಅಧಿವೇಶನದ ಅವಧಿ** :- ಯುವ ಸಂಸತ್ತಿನ ಅಧಿವೇಶನದ-ಅವಧಿಯು ಒಂದು ಗಂಟೆ ಅವಧಿಯನ್ನು ಮೀರತಕ್ಕದಲ್ಲ ಮತ್ತು ಇದರಲ್ಲಿ ಸುಮಾರು 20 ನಿಮಿಷಗಳ ಅವಧಿಯನ್ನು ಪ್ರಶ್ನೆಗಳಿಗೆ ಕಾಯ್ದಿರಿಸತಕ್ಕದ್ದು.

7. **ಯುವ ಸಂಸತ್ತಿನ ಅಧಿವೇಶನದಲ್ಲಿಯ ಚರ್ಚೆಯ ವಿಷಯ** :- ಪ್ರಶ್ನೋತ್ತರಗಳಿಗೆ ಅಥವಾ ಇತರ ಚರ್ಚೆಗೆ ಯಾವುದೇ ನಿರ್ದಿಷ್ಟ ವಿಷಯಗಳನ್ನು ಗೊತ್ತುಪಡಿಸಿರುವುದಿಲ್ಲ. ಆದಾಗ್ಯೂ, ಯುವ ಸಂಸತ್ತಿನಲ್ಲಿ ಕೇಳಲಾಗುವ ಪ್ರಶ್ನೆಗಳು, ಇತ್ತೀಚಿನ ಕ್ಷೇಮಾಭ್ಯುದಯ ಕಾರ್ಯಚಟುವಟಿಕೆಗಳು, ರಾಷ್ಟ್ರದ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿ, ಶಿಕ್ಷಣ, ಮತೀಯ ಸಾಮರಸ್ಯ, ಆರೋಗ್ಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿರುವುದು ಅಪೇಕ್ಷಣೀಯ.

8. **ಭಾಷೆ** :- ಭಾಗವಹಿಸುವವರು, ಕನ್ನಡ, ಹಿಂದಿ ಅಥವಾ ಇಂಗ್ಲೀಷ್ ಅಥವಾ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ದಿಷ್ಟಪಡಿಸಬಹುದಾದಂಥ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಬಹುದು.

9. **ಯುವ ಸಂಸತ್ ನಡೆಯುವ ಸ್ಥಳ** :- ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಒಂದು ಶಿಕ್ಷಣ ಸಂಸ್ಥೆಯು ತನ್ನದೇ ಆದ ಕಟ್ಟಡದಲ್ಲಿ ಅಥವಾ ಅವು ಇಚ್ಛಿಸುವಂಥ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದು. ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನಾಲಯಕ್ಕೆ ಚರ್ಚೆಯ ವಿಷಯಗಳ ಮಾಹಿತಿಯೊಂದಿಗೆ ಸ್ಪರ್ಧೆ ನಡೆಸುವ ಸ್ಥಳದ ವಿವರಗಳನ್ನು ಸ್ಪರ್ಧೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲೇ ತಿಳಿಸತಕ್ಕದ್ದು.

10. **ಬಹುಮಾನಗಳು** :- ಈ ಮುಂದಿನ ಬಹುಮಾನಗಳನ್ನು ಇರಿಸಲಾಗಿದೆ:-

(i) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಗೆ ಪಾರಿತೋಷಕ (ಸಂಸದೀಯ ಪಾರಿತೋಷಕ).

(ii) ಅರ್ಹತೆಯ ಆಧಾರದ ಮೇಲೆ ಸ್ಪರ್ಧೆಯಲ್ಲಿನ ಉತ್ತಮ ಗುಣಮಟ್ಟದ ಪ್ರದರ್ಶನಕ್ಕಾಗಿ ಮೊದಲ ಐದು ಸ್ಥಾನ ಪಡೆದ ಸಂಸ್ಥೆಗಳಿಗೆ ಟ್ರೋಫಿಗಳು.

(iii) ಪ್ರತಿಯೊಂದು ಸಂಸ್ಥೆಯಿಂದ ಭಾಗವಹಿಸಿರುವ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾದವರಿಗೆ ಪದಕಗಳು/ಕಪ್ಪುಗಳು/ಪುಸ್ತಕಗಳ ರೂಪದಲ್ಲಿ ವೈಯಕ್ತಿಕ ಬಹುಮಾನಗಳು. ಬಹುಮಾನಗಳ ಒಟ್ಟು ಸಂಖ್ಯೆಯು 80 ನ್ನು ಮೀರತಕ್ಕದ್ದಲ್ಲ.

(iv) ಇತರೆ ವೆಚ್ಚಗಳು.

ಸೂಚನೆ :- ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮೇಲಿನ ನಾಲ್ಕು ಬಾಬುಗಳಿಗೆ ಸಂಬಂಧಿಸಿದ ವೆಚ್ಚವನ್ನು ವ್ಯತ್ಯಾಸಗೊಳಿಸಬಹುದು. ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದಿಂದ ಮರುಸಂದಾಯವಾಗುವ ಗರಿಷ್ಠ ಮೊಬಲಗು ವಾರ್ಷಿಕವಾಗಿ, ಯೋಜನೆಯ 15ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಮೀರತಕ್ಕದ್ದಲ್ಲ.

ಪಾರಿತೋಷಕವು ಪರ್ಯಾಯ ಪಾರಿತೋಷಕವಾಗಿದ್ದು ಅದನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಸಂಸ್ಥೆಯು ಒಂದು ವರ್ಷದವರೆಗೆ ಉಳಿಸಿಕೊಳ್ಳಬಹುದಾಗಿದೆ. ಆದಾಗ್ಯೂ, ಒಂದೇ ಸಂಸ್ಥೆಯು ಮೂರು ನಿರಂತರ ವರ್ಷಗಳು ಪಾರಿತೋಷಕವನ್ನು ಗೆದ್ದರೆ ಆ ಸಂಸ್ಥೆಯೇ ಅದನ್ನು ಖಾಯಂ ಆಗಿ ಇಟ್ಟುಕೊಳ್ಳುವುದು.

ಅನುಬಂಧ-II ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸಂಸ್ಥೆಗಳಿಗೆ ನೀಡತಕ್ಕದ್ದು.

ಅನುಬಂಧ-III ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

11. ತೀರ್ಪುಗಾರರ ಸಮಿತಿ :– ಪ್ರತಿಯೊಂದು ಸಂಸ್ಥೆಗಳ ಮೌಲ್ಯಮಾಪನಕ್ಕಾಗಿ ತೀರ್ಪುಗಾರರ ಸಮಿತಿಯನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ರಚಿಸತಕ್ಕದ್ದು ಹಾಗೂ ಅದರಲ್ಲಿ ಶಿಕ್ಷಣ ತಜ್ಞರು ವಿಧಾನಸಭೆ/ಪರಿಷತ್ತಿನ ಸದಸ್ಯರು ಮತ್ತು ಸಂಸದೀಯ ಸಂಸ್ಥೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರರನ್ನು ಒಳಗೊಂಡಿರಬಹುದು. ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಒಬ್ಬ ಅಧಿಕಾರಿಯು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

12. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು :– ಸ್ಪರ್ಧೆಯಲ್ಲಿ ಸಾಧನೆಯನ್ನು ನಿರ್ಧರಿಸುವಾಗ ಸಮಿತಿಯು, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರತಕ್ಕದ್ದು.

13. ಮರು ಪ್ರದರ್ಶನ :– ಪ್ರತಿ ವರ್ಷದ ಸ್ಪರ್ಧೆಗಳ ಮುಕ್ತಾಯದ ಸಂದರ್ಭದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ನಿರ್ಧರಿಸಬಹುದಾದ ಸ್ಥಳ ಮತ್ತು ದಿನಾಂಕದಂದು ಸ್ಪರ್ಧೆಯ ಬಹುಮಾನ ವಿತರಣೆಯ ಸಮಾರಂಭದಲ್ಲಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಯು ಮತ್ತೊಮ್ಮೆ ಪ್ರದರ್ಶನ ಮಾಡುವಂತೆ ಅಗತ್ಯಪಡಿಸಬಹುದು.

14. ವರದಿ :– ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ಸ್ಪರ್ಧೆಯು ಮುಗಿದ ಮೇಲೆ ಅನುಬಂಧ–೫ಗಿ ರಲ್ಲಿ ನಿಯಮಿಸಲಾದ ನಮೂನೆಯಲ್ಲಿ, ಅದರಲ್ಲಿ ಮೆರಿಟ್ ಆಧಾರದ ಮೇಲೆ, ಮೊದಲನೇ ಐದು ಸ್ಥಾನ ಪಡೆದ ಶಾಲೆಗಳೂ ಸೇರಿದಂತೆ ಭಾಗವಹಿಸಿದ ಎಲ್ಲಾ ಶಾಲೆಗಳ ಸಂಖ್ಯೆಯನ್ನು ಸೂಚಿಸಿ ವೈಯಕ್ತಿಕ ಬಹುಮಾನಗಳ ಸಂಖ್ಯೆ ಮುಂತಾದವುಗಳನ್ನು ಒಳಗೊಂಡ ಒಂದು ವರದಿಯನ್ನು ತಯಾರಿಸತಕ್ಕದ್ದು. ವರದಿಯನ್ನು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಉಪ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ಪ್ರತಿನಿಧಿಯು ಸಹಿ ಮಾಡತಕ್ಕದ್ದು.

ನಿಯಮಿಸಲಾದ ನಮೂನೆಯಲ್ಲಿನ ವರದಿಯನ್ನು ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.

ಅನುಬಂಧ–II

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ

"ಯುವ ಸಂಸತ್ ಸ್ಪರ್ಧೆ"

(ಕಾಲೇಜಿನ ಹೆಸರು)

.... ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ಇವರು ....ನೇ ವರ್ಷದಲ್ಲಿ ನಡೆಸಿದ "ಯುವ ಸಂಸತ್" ಸ್ಪರ್ಧೆಯಲ್ಲಿ ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

ಸಕ್ಷಮ ಪ್ರಾಧಿಕಾರಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ
ಕಾಲೇಜು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ

ಅನುಬಂಧ–III

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ

"ಯುವ ಸಂಸತ್ ಸ್ಪರ್ಧೆ"

....ಪದವಿ ಪೂರ್ವ ಕಾಲೇಜಿನ .... ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ.. ಅವರಿಗೆ .... ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಬೆಂಗಳೂರು ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ನೇತೃತ್ವದಲ್ಲಿ ನಡೆಸಲಾದ "ಯುವ ಸಂಸತ್ ಸ್ಪರ್ಧೆ" ಯಲ್ಲಿನ ಅತ್ಯುತ್ತಮ ಸಾಧನೆಗೆ .... ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

ಸಕ್ಷಮ ಪ್ರಾಧಿಕಾರಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ
ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ

ಅನುಬಂಧ-IV

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯವು

------------- ವರ್ಷದಲ್ಲಿ ನಡೆಸಿದ ಯುವ ಸಂಸತ್ ಸ್ಪರ್ಧೆಯ ವರದಿ/ಹಣಕಾಸು ವೆಚ್ಚದ ವಿವರ.

1.	ಜಿಲ್ಲೆ / ಪ್ರಾದೇಶಿಕ ವ್ಯಾಪ್ತಿಯ ಹೆಸರು :		
2.	ಯುವ ಸಂಸತ್ ಸ್ಪರ್ಧೆಯನ್ನು ನಡೆಸಿದ ಶೈಕ್ಷಣಿಕ ವರ್ಷ :		
3.	ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಕಾಲೇಜುಗಳ ಸಂಖ್ಯೆ :		
4.	ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ :		
5.	ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ :		
6.	ಜಿಲ್ಲೆ / ಪ್ರಾದೇಶಿಕ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳನ್ನು ಗಳಿಸಿದ ಕಾಲೇಜುಗಳ, ಮೆರಿಟ್, ಆಧಾರದ ಮೇಲೆ, ಹೆಸರು ಮತ್ತು ವಿಳಾಸ :		
7.	ಜಿಲ್ಲೆ / ಪ್ರಾದೇಶಿಕ ಮಟ್ಟದ ಪ್ರದೇಶಗಳ ಸ್ಪರ್ಧೆಯಲ್ಲಿ ಮಾಡಿರುವ ವೆಚ್ಚಗಳ ಒಟ್ಟು ಮೊಬಲಗು :		
	ವೆಚ್ಚಗಳ ಬಾಬು	ವೆಚ್ಚ ಮಾಡಿದ ಒಟ್ಟು ಮೊಬಲಗು	
	<u>ವಿಷಯಾಭಿಮುಖ ಶಿಕ್ಷಣಕ್ಕಾಗಿ</u> 1. 2.		
	<u>ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆಗಾಗಿ</u> 1. 2.		
	<u>ಬಹುಮಾನ ವಿತರಣೆ ಸಮಾರಂಭಕ್ಕಾಗಿ</u> 1. 2.		
8.	ಸ್ಪರ್ಧೆ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ತೆಗೆದ ಫೋಟೋಗಳು (5)		

1. ಮೇಲೆ ಸೂಚಿಸಿದಂತೆ ಕಾಲೇಜುಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಯಿತು.
2. ವೆಚ್ಚದ ಮೂಲ ಓಚರುಗಳೊಂದಿಗೆ ತಾಳೆ ನೋಡಲಾಗಿದ್ದು ಅವುಗಳು ಸರಿಯಾಗಿದೆ ಎಂದು ಕಂಡುಬಂದಿದೆ ಹಾಗೂ ಅವುಗಳ ಪ್ರತಿಗಳನ್ನು ಲಗತ್ತಿಸಿದೆ.

– ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ :

(ಹೆಸರು)

ಪದನಾಮದ

(ಉಪ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಗಳು ಸಹಿ ಮಾಡುವುದು)

ಜಿಲ್ಲೆ / ಪ್ರಾದೇಶಿಕ ವ್ಯಾಪ್ತಿಯ ಅಧಿಕಾರಿಯ ವಿಳಾಸ,

ದೂರವಾಣಿ ಸಂಖ್ಯೆ / ಇಮೇಲ್ ಐ.ಡಿ.

<u>ಸೂಚನೆ :-</u>

ವಿಷಯಾಭಿಮುಖ ಶಿಕ್ಷಣ ಎಂದರೆ ಯುವ ಸಂಸತ್ತನ್ನು ನಡೆಸುವುದರ ಪ್ರಭಾರದಲ್ಲಿರುವ ಶಿಕ್ಷಕರ/ಶಿಕ್ಷಣ ಅಧಿಕಾರಿಗಳ ಪ್ರಯೋಜನಕ್ಕಾಗಿ ನೋಡಲ್ ಪ್ರಾಧಿಕಾರಿಗಳು ನಡೆಸುವ ಒಂದು ಕೋರ್ಸು. ಭಾಗವಹಿಸುವವರಿಗೆ ಹಂಚುವ ಸಾಹಿತ್ಯ/ಲೇಖನ ಸಾಮಗ್ರಿಗಳ ರೂಪದಲ್ಲಿ ವೆಚ್ಚಗಳುಂಟಾಗುತ್ತವೆ.

ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ ಎಂದರೆ, ಸ್ಪರ್ಧೆಯನ್ನು ನಡೆಸುವುದಕ್ಕೆ ವಹಿಸಿದ ವೆಚ್ಚ, ಇದು ಉಪಹಾರಕ್ಕೆ, ಭಾಗವಹಿಸುವ ವಿದ್ಯಾರ್ಥಿಗಳ ಸಾರಿಗೆ ವ್ಯವಸ್ಥೆಗೆ, ಬಹುಮಾನ/ಪಾರಿತೋಷಕ ಮುಂತಾದವುಗಳಿಗೆ ತಗಲಿದ ವೆಚ್ಚವನ್ನು ಒಳಗೊಳ್ಳುತ್ತದೆ.

ಬಹುಮಾನ ವಿತರಣೆ ಸಮಾರಂಭ ಎಂದರೆ, ರಾಜ್ಯ ಮಟ್ಟದ ಬಹುಮಾನ ವಿಜೇತರು ಮುಂತಾದವರಿಗೆ ಬಹುಮಾನಗಳು/ಷೀಲ್ಡ್‌ಗಳನ್ನು (ಪಾರಿತೋಷಕಗಳನ್ನು) ವಿತರಣೆ ಮಾಡುವುದಕ್ಕಾಗಿ ನಡೆಸಿದ ಸಮಾರಂಭ, ಇದು ಪ್ರತಿಭಾನ್ವಿತ ಶಾಲೆಗಳು ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳು, ನೆನಪಿನ ಕಾಣಿಕೆಗಳು, ಪ್ರಮಾಣ ಪತ್ರಗಳು, ಷೀಲ್ಡ್‌ಗಳ (ಪಾರಿತೋಷಕಗಳು) ರೂಪದಲ್ಲಿ ಬಹುಮಾನ ಮುಂತಾದವುಗಳಿಗಾಗಿ ವಹಿಸಿದ ವೆಚ್ಚವನ್ನು ಒಳಗೊಳ್ಳುತ್ತದೆ.

* ವರದಿಯನ್ನು ಸ್ಪರ್ಧೆಯು ಮುಗಿದ ಒಂದು ವಾರದೊಳಗಾಗಿ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರಿಗೆ ಕಳುಹಿಸತಕ್ಕದ್ದು.

ಜಿಲ್ಲಾ ಮಟ್ಟದ ಹಾಗೂ ಪ್ರಾದೇಶಿಕ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು

1. **ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ :-** ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ಇತರ ಸಿಬ್ಬಂದಿಯ ಸಮನ್ವಯದೊಂದಿಗೆ ಯುವಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾ ವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

2. **ಯುವ ಸಂಸತ್ ಸ್ಪರ್ಧೆಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ :-** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

5) ಪ್ರಥಮ ವರ್ಷದ ಹಾಗೂ ದ್ವಿತೀಯ ವರ್ಷದ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತರ ಅವಧಿಯಲ್ಲಿ ಮತ್ತು ಇತರ ಶಾಸನ-ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

3. **ಸ್ಪರ್ಧೆ ನಡೆಸುವ ವಿಧಾನ :-** ಕೇಂದ್ರ ಸರ್ಕಾರವು ಒದಗಿಸಿರುವ ಮಾದರಿ ಪ್ರಶ್ನೆಗಳ ಪಟ್ಟಿ ಇದನ್ನು ಅನುಬಂಧ-I, ಕಾರ್ಯಕಲಾಪಗಳ ಒಂದು ಮಾದರಿ ಪಟ್ಟಿ ಅನುಬಂಧ-II, 1998ರ ಕೇಂದ್ರ ಸರ್ಕಾರದ ಯುವ ಸಂಸತ್ ಸ್ಪರ್ಧೆಯ ಒಂದು ಟಿಪ್ಪಣಿ ಅನುಬಂಧ-III, ರಲ್ಲಿ ಒದಗಿಸಲಾಗಿದೆ. ಇದರೊಂದಿಗೆ ಲೋಕಸಭೆ ಹಾಗೂ ರಾಜ್ಯ ಸಭೆಗಳ ವೆಬ್‌ಸೈಟ್ http://loksabha.gov.in ಹಾಗೂ http://rajyasabha.gov.in ಇವುಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಪಡೆದು ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬಹುದು.

4. **ಪ್ರಾದೇಶಿಕ ಮಟ್ಟದ ಸ್ಪರ್ಧೆಗಳು :-** ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಉಪ ನಿರ್ದೇಶಕರ ನೇತೃತ್ವದಲ್ಲಿ ವಿಷಯ ತಜ್ಞರು ಹಾಗೂ ವಿಧಾನ ಸಭೆ/ವಿಧಾನ ಪರಿಷತ್ತು/ಜಿಲ್ಲಾ ಪಂಚಾಯತ್ ಅಧ್ಯಕ್ಷ/ಸದಸ್ಯರ ಮಾರ್ಗದರ್ಶನದಲ್ಲಿ ನಡೆಸತಕ್ಕದ್ದು. ಪ್ರತಿಯೊಂದು ಜಿಲ್ಲೆಯಿಂದ ಅಂಕಗಳ ಆಧಾರದ ಮೇಲೆ ಆಯ್ಕೆಯಾದ ಪ್ರಥಮ ಐದು ವಿದ್ಯಾರ್ಥಿಗಳನ್ನು ಪ್ರಾದೇಶಿಕ ಮಟ್ಟದ ಸ್ಪರ್ಧೆಗೆ ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.

ಪ್ರಾದೇಶಿಕ ಮಟ್ಟದ ಸ್ಪರ್ಧೆಗಳಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಜಂಟಿ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲದ ಅಧಿಕಾರಿಗಳು ತೀರ್ಪುಗಾರರಾಗಿ ಭಾಗವಹಿಸುವರು. ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಗಳು ಹಾಗೂ ವಿಧಾನ ಸಭೆ/ ಪರಿಷತ್ತಿನ ಸದಸ್ಯರು ತೀರ್ಪುಗಾರರಾಗಿರುವರು. ಪ್ರಾದೇಶಿಕ ಮಟ್ಟದಲ್ಲಿ ಆಯ್ಕೆಯಾದ ಒಟ್ಟು 60 ವಿದ್ಯಾರ್ಥಿಗಳನ್ನು (ಅಂಕಗಳ ಆಧಾರದ ಮೇಲೆ) ರಾಜ್ಯ ಮಟ್ಟದ ಸ್ಪರ್ಧೆಗೆ ಆಹ್ವಾನಿಸಲಾಗುವುದು.

5. **ರಾಜ್ಯ ಮಟ್ಟದ ಸ್ಪರ್ಧೆಗಳು :-** ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಜನವರಿ ತಿಂಗಳ ಮೊದಲ ವಾರದಲ್ಲಿ ಅಥವಾ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಸಲಾಗುವುದು. ಸದರಿ ಸ್ಪರ್ಧೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಹಿತಿ ಮತ್ತು ಮಾರ್ಗದರ್ಶನಗಳನ್ನು ಸೂಕ್ತ ಸಮಯದಲ್ಲಿ ನೀಡಲಾಗುವುದು.

ಪಿ.ಆರ್. 1886

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಅಕ್ಟೋಬರ್ ೭, ೨೦೧೦ (ಆಶ್ವಯುಜ ೧೫, ಶಕ ವರ್ಷ ೧೯೩೨)	ಸಂಚಿಕೆ ೪೦

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 215 ಆಸೇವ 2010, ಬೆಂಗಳೂರು, ದಿನಾಂಕ: 06ನೇ ಸೆಪ್ಟೆಂಬರ್, 2010

ಈ ಕೆಳಕಂಡ ಕೆ.ಎ.ಎಸ್. (ಆಯ್ಕೆ ಶ್ರೇಣಿ/ಕಿರಿಯ ಶ್ರೇಣಿ) ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವರ್ಗಾಯಿಸಿ ನೇಮಿಸಿದೆ.

ಕ್ರಸಂ.	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಹುದ್ದೆ ಶ್ರೀಯುತರು :	ವರ್ಗಾಯಿಸಿ ನೇಮಿಸಲಾದ ಹುದ್ದೆ
1	ಎನ್. ಎಂ. ಪನಾಲಿ, ಆಯ್ಕೆ ಶ್ರೇಣಿ, ಮುಖ್ಯ ಆಡಳಿತಾಧಿಕಾರಿ, ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೀದರ್	ಮುಖ್ಯ ಆಡಳಿತಾಧಿಕಾರಿ, ಸಂಜಯಗಾಂಧಿ ಅಪಘಾತ ಮತ್ತು ಪುನರ್ವಸತಿ ಆಸ್ಪತ್ರೆ, ಬೆಂಗಳೂರು–ಖಾಲಿ ಹುದ್ದೆಗೆ
2	ಬಿ. ಸಿ. ಸತೀಶ್, ಕಿರಿಯ ಶ್ರೇಣಿ, ನೇಮಕಾತಿ ನಿರೀಕ್ಷಣೆಯಲ್ಲಿ,	ಉಪವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ, ಬೆಳಗಾಂ ಜಿಲ್ಲೆ–ಶ್ರೀ.ಪಿ.ಎನ್.ರವೀಂದ್ರ ಇವರ ಸ್ಥಾನದಲ್ಲಿ
3	ಪಿ.ಎನ್. ರವೀಂದ್ರ, ಕಿರಿಯ ಶ್ರೇಣಿ, ಉಪವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ, ಬೆಳಗಾಂ ಜಿಲ್ಲೆ.	ಉಪವಿಭಾಗಾಧಿಕಾರಿ, ಇಂಡಿ ಉಪವಿಭಾಗ, ಬಿಜಾಪುರ ಜಿಲ್ಲೆ– ಖಾಲಿ ಹುದ್ದೆಗೆ
4	ಎ.ಎಂ.ಯೋಗೇಶ್, ಕಿರಿಯ ಶ್ರೇಣಿ, ಕೊಳ್ಳೇಗಾಲ ಉಪ ವಿಭಾಗ, ಚಾಮರಾಜನಗರ ಜಿಲ್ಲೆ.	ಉಪ ಆಡಳಿತಾಧಿಕಾರಿ, ಕಾಡಾ, ಮೈಸೂರು– ಖಾಲಿ ಹುದ್ದೆಗೆ
5	ಎ.ಬಿ. ಬಸವರಾಜು, ಕಿರಿಯ ಶ್ರೇಣಿ, ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹುಣಸೂರು.	ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪ ವಿಭಾಗ, ಚಾಮರಾಜನಗರ ಜಿಲ್ಲೆ – ಶ್ರೀ.ಎ.ಎಂ.ಯೋಗೇಶ್, ಇವರ ಸ್ಥಾನದಲ್ಲಿ
6	ಜಹೀರಾ ನಸೀಂ, ಕಿರಿಯ ಶ್ರೇಣಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಗುಲ್ಬರ್ಗಾ ಹುದ್ದೆಗೆ ವರ್ಗಾವಣೆ ಆದೇಶದಲ್ಲಿ.	ಇವರ ವರ್ಗಾವಣೆ ಆದೇಶವನ್ನು ಮಾರ್ಪಡಿಸಿ ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ., ಮೈಸೂರು ಹುದ್ದೆಗೆ – ಶ್ರೀಮತಿ ಸುಧಾ ಇವರ ಸ್ಥಾನದಲ್ಲಿ ನೇಮಿಸಲು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ (ಸೇವೆಗಳು–2).

ಪಿ.ಆರ್. 1411

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 536 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 25ನೇ ಆಗಸ್ಟ್, 2010

ಶ್ರೀಮತಿ ಕವಿತಾಯೋಗಪ್ಪನವರ್, ತಹಶೀಲ್ದಾರ್, ಸ್ಥಳ ನಿರೀಕ್ಷಣೆಯಲ್ಲಿರುವ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಿಯೋಜನೆ ಮೇಲೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು ಇಲ್ಲಿನ ಆಡಳಿತಾಧಿಕಾರಿ ಖಾಲಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ವಶಕ್ಕೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಸೇವೆಗಳು-3)

ಪಿ.ಆರ್. 1414

ಅಧಿಸೂಚನೆ

ಸಂಖ್ಯೆ: ಕಂಇ 468 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 24ನೇ ಆಗಸ್ಟ್, 2010

ಶ್ರೀ ಎಫ್.ಬಿ. ನಂದಗಡಿ, ನಿವೃತ್ತ ತಹಶೀಲ್ದಾರ್, ಇವರ ಖಾತೆಯಲ್ಲಿರುವ 173 ದಿನಗಳ ಗಳಿಕೆ ರಜೆಯನ್ನು ಕರ್ನಾಟಕ ಸೇವಾ ನಿಯಮಗಳು, ನಿಯಮ 118(1) (ಎ) ಹಾಗೂ 4 ರನ್ವಯ ನಗದೀಕರಿಸಲು ಮಂಜೂರಾತಿ ನೀಡಿದೆ.

ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಇರುವುದಿಲ್ಲವೆಂದು ಈ ಮೂಲಕ ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 1415

CITY CIVIL COURT

NOTIFICATION

No. ADM-I(E) 1617/10, Dated : 8th September, 2010

Sri K.S. Jere, Asst. Registrar, City Civil Court, Bangalore who has retired from Service on attaining the age of superannuation w.e.f., 31-08-2010, is granted cash equivalent of leave salary for earned leave not exceeding 240 days at his credit on the date of his retirement i.e., w.e.f. 31-08-2010 in accordance with Rule 118-A of K.C.S.Rs.,

Further, it is certified that there are no departmental enquiries/criminal proceedings are pending against Sri K.S. Jere, Asst. Registrar of this Court, who has retired from Service on attaining the age of superannuation on the afternoon of 31-08-2010.

He shall be paid pay and allowances admissible for the period of earned leave at his credit as per rules.

By Order of the Prl. City Civil & Sessions Judge,
REGISTRAR,
, City Civil Court, Bangalore

P.R. 1416

PERSONNEL AND ADMINISTRATIVE REFORMS SECRETARIAT

NOTIFICATION

No. DPAR 292 SKM 2010, Bangalore, Dated 7th September, 2010

The deputation of Sri P.T. Rudra Gouda, on interstate deputation from Puducherry Civil Services (Selection Grade), presently working with Government of Karnataka as Addl. District Commissioner and Addl. District Magistrate, Gadag District, Gadag is extended by two more years with effect from 14-08-2010 or until further orders whichever is earlier, as his earlier period of deputation to Government of Karnataka ends on 13-08-2010 and he is continued in the existing post until further orders,

The terms & conditions issued already shall continue.

By Order and in the name of the Governor of Karnataka,
M. VASUDEVAMURTHY,
Under Secretary to Government,
DP & AR (Services-II).

P.R. 1417

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 210 ಸಿಶಾಸೇ 2010, ಬೆಂಗಳೂರು, ದಿನಾಂಕ: 01ನೇ ಸೆಪ್ಟೆಂಬರ್, 2010

ಇದೇ ಸಂಖ್ಯೆಯ ದಿನಾಂಕ : 29-07-2010ರ ಅಧಿಸೂಚನೆಯನ್ನು ಮುಂದುವರೆಸುತ್ತಾ, ಶ್ರೀ ಎಸ್.ಎನ್. ರಾಯನಗೌಡ್ರು, ಶಾಖಾಧಿಕಾರಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ಶ್ರೀ ಬಾಲಕೃಷ್ಣ ರಾವ್, ಶಾಖಾಧಿಕಾರಿ, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಇವರುಗಳ ಜನ್ಮ ದಿನಾಂಕವು ಅನುಕ್ರಮವಾಗಿ 01-04-1951 ಹಾಗೂ 10-03-1951 ಆಗಿದ್ದು, ಇವರುಗಳು 60 ವರ್ಷ ವಯೋಮಿತಿಯು ಪೂರ್ಣಗೊಂಡು ದಿನಾಂಕ : 31-03-2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎನ್. ಕೃಷ್ಣಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ, (ಸಿಬ್ಬಂದಿ)

ಪಿ.ಆರ್. 1418

ಅಧಿಸೂಚನೆ

ಸಂಖ್ಯೆ: ಸಿಆಸುಇ 40 ಇಆತ 2010, ಬೆಂಗಳೂರು, ದಿನಾಂಕ: 08ನೇ ಸೆಪ್ಟೆಂಬರ್, 2010

ಶ್ರೀ ರಂಗಯ್ಯ, ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ರಾಯಚೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ ಇಲ್ಲಿ ಖಾಲಿ ಇರುವ ಉಪ ಪ್ರಾಚಾರ್ಯರ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ. ಸದರಿ ಅಧಿಕಾರಿಯು ಕೂಡಲೇ ವರ್ಗಾಯಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು ಮತ್ತು ಇದು ಕೋರಿಕೆ ವರ್ಗಾವಣೆಯಾದ ಕಾರಣ ಯಾವುದೇ ಭತ್ಯೆ ಪಡೆಯಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಬ್ದುಲ್ ರಹಮಾನ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ, (ಆಸು-ತರಬೇತಿ)

ಪಿ.ಆರ್. 1419

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಸಸ/ಆ-1/33/ಎಫ್‌ಪಿಪಿ/97, ಬೆಂಗಳೂರು, ದಿನಾಂಕ: 13ನೇ ಸೆಪ್ಟೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಉಪ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6 (ii)ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ಉಪ ಕಾರ್ಯದರ್ಶಿ (ಪ್ರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ. ನೂರ್ ಮಹಮದ್, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 20025-525-22650-600-26250-675-28275ರಲ್ಲಿ ಉಪ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,
ಎಂ. ಕೆ. ವಿಶಾಲಾಕ್ಷಿ,
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ.

ಪಿ.ಆರ್. 1420

ಅಧಿಸೂಚನೆ

ಸಂಖ್ಯೆ: ಕವಿಸಸ/ಆ-1/89/ಎಫ್‌ಪಿಪಿ/96-03, ಬೆಂಗಳೂರು, ದಿನಾಂಕ: 13ನೇ ಸೆಪ್ಟೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧೀನ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6 (ii)ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ಅಧೀನ ಕಾರ್ಯದರ್ಶಿ (ಪ್ರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 14050-350-14400-400-16800-450-19500-525-22650-600-25050ರಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

1. ಶ್ರೀಮತಿ ಶಶಿಕಲಾ ಭಟ್, ಅಧೀನ ಕಾರ್ಯದರ್ಶಿ (ಪ್ರ)
2. ಶ್ರೀಮತಿ ಮುನೀರುನ್ನೀಸಾ, ಅಧೀನ ಕಾರ್ಯದರ್ಶಿ(ಪ್ರ)

ಸಭಾಧ್ಯಕ್ಷರ ಆದೇಶಾನುಸಾರ,
ಎಂ. ಕೆ. ವಿಶಾಲಾಕ್ಷಿ,
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ.

ಪಿ.ಆರ್. 1421

ಅಧಿಸೂಚನೆ

ಸಂಖ್ಯೆ: ಕವಿಸಸ/ಆ-1/114/ಎಫ್‌ಪಿಪಿ/2005, ಬೆಂಗಳೂರು, ದಿನಾಂಕ: 13ನೇ ಸೆಪ್ಟೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಶಾಖಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6 (ii)ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ಶಾಖಾಧಿಕಾರಿ (ಪ್ರ) ಹಾಗೂ ಹಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ನೌಕರರುಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 11400-300-12300-350-14400-400-16800-450-19500-525-21600ರಲ್ಲಿ ಶಾಖಾಧಿಕಾರಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

1. ಶ್ರೀ ಪಿ. ನಟರಾಜು, ಶಾಖಾಧಿಕಾರಿ (ಪ್ರ)
2. ಶ್ರೀ ಎಂ. ಮೋಹನ್, ಶಾಖಾಧಿಕಾರಿ (ಪ್ರ)
3. ಶ್ರೀ ಕೆ.ಜಿ. ಜೋಗಯ್ಯ, ಹಿರಿಯ ಸಹಾಯಕ

ಸಭಾಧ್ಯಕ್ಷರ ಆದೇಶಾನುಸಾರ,
ಎಂ. ಕೆ. ವಿಶಾಲಾಕ್ಷಿ,
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ.

ಪಿ.ಆರ್. 1422

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 534 ಮೈಅಪ್ರಾ 2010, ಬೆಂಗಳೂರು, ದಿನಾಂಕ: 9ನೇ ಸೆಪ್ಟೆಂಬರ್, 2010

